# ಗುಮ್ಮಳಾಪುರದ ಸಿದ್ಧಲಿಂಗ ಯತಿಗಳ ಶೂನ್ಯ ಸಂಪಾದನೆ: ಕೆಲವು ಟಿಪ್ಪಣಿಗಳು

**ಸಿ. ನಾಗಭೂಷಣ**

ಹಿರಿಯ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15123743

## ABSTRACT:

ಅಭಿನವ ಅಲ್ಲಮರೆಂದು ಖ್ಯಾತರಾದ ತೋಂಟದ ಸಿದ್ಧಲಿಂಗಯತಿಗಳು, ತಮ್ಮ ಶಿಷ್ಯ-ಪ್ರಶಿಷ್ಯ ಪರಂಪರೆಯ ಮೂಲಕ, ಗ್ರಂಥಸಂಪಾದನೆಯ ವಿಧಿವಿಧಾನಗಳನ್ನು ಅನ್ವಯಿಸಿ ವಚನಗಳನ್ನು ಸಂಕಲಿಸುವ ವ್ಯಾಖ್ಯಾನಿಸುವಂತಹ ಸಾಹಿತ್ಯಕ ಚಟುವಟಿಕೆಗಳನ್ನು ಕೈಗೊಂಡಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ವಿಶಿಷ್ಟವಾದುದಾಗಿದೆ. ವಚನ ರಚನೆ ಹಾಗೂ ವಚನ ರಕ್ಷಣೆ, ವ್ಯಾಖ್ಯಾನ ಎರಡರಲ್ಲಿಯೂ ಸ್ಥಾನ ಪಡೆದಿದ್ದಾರೆ. ವಚನಗಳನ್ನು ಸಂಕಲಿಸುವ, ವ್ಯಾಖ್ಯಾನಿಸುವಂತಹ ಸಾಹಿತ್ಯಕ ಚಟುವಟಿಕೆಗಳನ್ನು ತಮ್ಮ ಶಿಷ್ಯ ಪ್ರಶಿಷ್ಯ ಪರಂಪರೆಯ ಮೂಲಕ ಅನುಷ್ಠಾನಗೊಳಿಸಿದರು. ''ಕಲ್ಯಾಣ ಕ್ರಾಂತಿಯ ವಿಪ್ಲವದ ನಂತರ ಅಳಿದುಳಿದ ವಚನ ಸಾಹಿತ್ಯವನ್ನು ಸಂರಕ್ಷಿಸುವ ಶೋಧಿಸುವ, ಸಂಕಲಿಸುವ, ವ್ಯಾಖ್ಯಾನಿಸುವ ಮೂಲಕ ಕಾಪಾಡಿಕೊಂಡು ಬರಲು 15 ಮತ್ತು 16 ನೇ ಶತಮಾನದ ಸಂಕಲನಕಾರರು ಕಾರಣರಾಗಿದ್ದಾರೆ. ಈ ಕಾರ್ಯ ವಿಧಾನದಲ್ಲಿ ಆಧುನಿಕ ಸಂಶೋಧನೆ ವಿಧಿವಿಧಾನಗಳಾದ ಆಕರ ಸಂಗ್ರಹ, ಸಂಯೋಜನೆ, ವಿಶ್ಲೇಷಣೆ ಎಂಬ ಮೂರು ಹಂತಗಳನ್ನು ಗುರುತಿಸಬಹುದಾಗಿದೆ. ಅಲ್ಲಲ್ಲಿ ಅಡಗಿದ್ದ ವಚನಗಳನು ಶೋಧಿಸುವಲ್ಲಿ, ಸಂಗ್ರಹಿಸುವಲ್ಲಿ, ನಾಮಾನುಗುಣವಾಗಿ, ವಿಷಯಾನುಗುಣವಾಗಿ ಜೋಡಿಸುವಲ್ಲಿ, ತಾತ್ವಿಕ ದೃಷ್ಟಿಯಿಂದ ಸಂಕಲಿಸುವಲ್ಲಿ, ಸಂವಾದ ರೂಪದಲ್ಲಿ ಸಂಯೋಜಿಸಿ ಸಂಪಾದಿಸುವಲ್ಲಿ, ವಚನಗಳ ಅಂತರಾರ್ಥ ಅರಿತು ವ್ಯಾಖ್ಯಾನಿಸುವಲ್ಲಿ ಆಧುನಿಕ ಗ್ರಂಥ ಸಂಪಾದನೆಯ ಸರ್ವ ಸಾಮಾನ್ಯ ತತ್ವಗಳನ್ನೇ ಅನುಸರಿಸಿದ್ದಾರೆ.'' (ಸಿ. ನಾಗಭೂಷಣ; ಶರಣ ಸಾಹಿತ್ಯ ದೀಪಿಕೆ, ಪು. 204) ''ಶೂನ್ಯಸಂಪಾದನೆ'' ಕೃತಿಯು ಶರಣರ ವಚನಗಳನ್ನು ಬಳಸಿಕೊಂಡು ಶರಣರ ಜೀವನ ಚಿತ್ರವನ್ನು ಬಿಡಿಸುವ ಹಾಗೂ ಶರಣತತ್ವವನ್ನು ಪ್ರತಿಪಾದಿಸುವುದಾಗಿದೆ. ಶೂನ್ಯಸಂಪಾದನೆಯು ತನ್ನ ಸಮಕಾಲೀನ ಸಂದರ್ಭದ ಅಗತ್ಯಗಳಿಗೆ ಸ್ಪಂದಿಸಿದರೆ, ಶರಣರು ರಚಿಸಿದ ಮೂಲ ವಚನಗಳು ಸಮಕಾಲೀನತೆಯ ಜತೆಗೆ ಸಾರ್ವಕಾಲಿಕ ಸತ್ಯಗಳ ಪ್ರತಿಪಾದನೆಗಳನ್ನು ಒಳಗೊಂಡಿವೆ. ಹಾಗೆಯೇ ಮಾನವನ ಬದುಕಿಗೆ ಮೂಲವಾಗಿ ಬೇಕಾಗಿರುವ ಆಧ್ಯಾತ್ಮದ ತಿರುಳನ್ನು ತಿಳಿಸಿಕೊಡುತ್ತದೆ.

## KEYWORDS:

ಶೂನ್ಯ ಸಂಪಾದನೆ, ವಚನ ಚಳವಳಿ, ಗ್ರಂಥ ಸಂಪಾದನೆ, ಗುಮ್ಮಳಾಪುರದ ಸಿದ್ಧಲಿಂಗ ಯತಿ, ಶಿವಗಣ ಪ್ರಸಾದಿಮಹದೇವಯ್ಯ.

ವೀರಶೈವ ತಾತ್ವಿಕ ಕೃತಿಗಳಲ್ಲಿ ''ಶೂನ್ಯ ಸಂಪಾದನೆ'' ಅತ್ಯಂತ ಮಹತ್ವದ ಕೃತಿಯಾಗಿದೆ. ''ಶೂನ್ಯ ಸಂಪಾದನೆ ಶರಣಧರ್ಮದ ಪರಿಭಾಷೆಯಾಗಿ ತೋರಿದರೂ ಅದೊಂದು ವಿಶಿಷ್ಟ ಬಗೆಯ ವೀರಶೈವ ಪುನರುಜ್ಜೀವನ ಕಾಲದ ಸಂಕಲನ ಗ್ರಂಥ.'' (ಶಬ್ದ ಸಂಪುಟ. ಎಸ್. ವಿದ್ಯಾಶಂಕರ. ಸ್ನೇಹ ಪ್ರಕಾಶನ, 2008. ಪು. ಸಂ. 290)''ಶೂನ್ಯ ಸಂಪಾದನೆಯ ಮೂಲಸಾಮಗ್ರಿ ಬಿಡಿವಚನಗಳು. ಬಿಡಿವಚನಗಳಿಂದ ವಾಸ್ತವವಾಗಿ ನಡೆದಿರಬಹುದಾದ ಘಟನೆಗಳನ್ನು ನಾಟಕೀಯವಾಗಿ ಚಿತ್ರಿಸುವುದು ಶೂನ್ಯ ಸಂಪಾದನೆಯ ಪ್ರಮುಖ ಗುರಿ. ವಚನ ಕರ್ತೃಗಳು ರಚಿಸಿರುವ ಬಹುಪಾಲು ವಚನಗಳು ಅವು ಯಾವ ಸಂದರ್ಭದಲ್ಲಿ ಹೊರಬಂದವು ಎಂಬುದಕ್ಕೆ ಸೂಚನೆಗಳು ಇಲ್ಲವೇ ಇಲ್ಲ. ಇದ್ದರೂ ಅತ್ಯಪೂರ್ವ. ಆ ಮುಕ್ತಕಗಳಂತಹ ವಚನಗಳನ್ನು ಆರಿಸಿಕೊಂಡು ಅವುಗಳನ್ನು ಒಂದು ಸಂದರ್ಭದಲ್ಲಿಟ್ಟು, ಉತ್ತರ ಪ್ರತ್ಯುತ್ತರವಾಗಿ ಜೋಡಿಸಿ ಮಧ್ಯೆ ಮಧ್ಯೆ ಸಂಕಲನಕಾರ ವಿಷಯ ಸ್ಪಷ್ಟತೆಗಾಗಿ ತನ್ನ ಮಾತುಗಳನ್ನು ಸೇರಿಸಿ ನಾಟಕೀಯ ಸನ್ನಿವೇಶಗಳನ್ನು ಚಿತ್ರಿಸಿರುವುದು ಶೂನ್ಯಸಂಪಾದನೆಗೆ ಒಂದು ಸ್ವತಂತ್ರ ಗ್ರಂಥದ ಸ್ಥಾನವನ್ನು ತಂದಿದೆ. 'ವಚನಕಾರರನ್ನು ಅವರು ಎದುರಿಸಿದ ಸನ್ನಿವೇಶ ಮತ್ತು ಅಲ್ಲಿ ವ್ಯಕ್ತವಾಗುವ ಅವರ ಗುಣ ಸ್ವಭಾವಗಳನ್ನು ಅವರು ಪಡೆದ

ಶೂನ್ಯದ ಲಾಭವನ್ನು ಅವರವರ ಮಾತುಗಳ ಮೂಲಕವಾಗಿಯೇ ಹೊಮ್ಮಿಸಿರುವ ಒಂದು ಅಪೂರ್ವಗ್ರಂಥ. “ (ಸಿ. ನಾಗಭೂಷಣ ವೀರಶೈವ ಸಾಹಿತ್ಯ ಕೆಲವು ಒಳನೋಟಗಳು, ಪು. 129). ವಚನಗಳ ಸಂಕಲನವೆನಿಸಿದ ಶೂನ್ಯ ಸಂಪಾದನೆಗಳು ಮರು ಓದಿನಿಂದ ಸೃಷ್ಟಿಯಾಗಿವೆ. ವಚನಗಳನ್ನು ಸಂಭಾಷಣೆಯ ರೀತಿಯಲ್ಲಿ ಜೋಡಿಸಿರುವುದು ಶೂನ್ಯ ಸಂಪಾದನೆಯ ವೈಶಿಷ್ಟ್ಯ. ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ನಡೆದ ಧಾರ್ಮಿಕ ಚಿಂತನೆಯಲ್ಲಿ ನಿರ್ಮಾಣವಾದ ವಚನಗಳ ವಾಸ್ತವಿಕತೆಯನ್ನು, ಹದಿನಾರನೆಯ ಶತಮಾನದಲ್ಲಿ ಪೂರಕ ಸಾಮಗ್ರಿಗಳಿಂದ ಕಟ್ಟಿಕೊಡುವ ಪ್ರಯತ್ನ ನಡೆಯಿತು. ಶೂನ್ಯಸಂಪಾದನೆಗಳ ಸೃಷ್ಟಿಗೆ ವಚನಕಾರರು ಮತ್ತು ಅವರ ವಚನಗಳೇ ಆಕರ. ಉಪಲಬ್ಧ ವಚನಗಳನ್ನು ಆಯಾ ಸಾಂದರ್ಭಿಕ ಹಿನ್ನಲೆಯಲ್ಲಿ ಆಡಿರಬೇಕೆಂದು ಆ ವಚನಗಳನ್ನು ವ್ಯವಸ್ಥಿತವಾಗಿ ಸಂಕಲಿಸಿದ ಪ್ರಯತ್ನವೇ ಶೂನ್ಯ ಸಂಪಾದನೆಯ ಉಗಮಕ್ಕೆ ಕಾರಣ. ಹೆಚ್ಚಿನ ಶರಣರ ವಚನಗಳನ್ನು ಬಹುಮಟ್ಟಿಗೆ ಶೂನ್ಯಸಂಪಾದನಕಾರ ಅಳವಡಿಸಿಕೊಂಡಿದ್ದಾನೆ. ಹೀಗಾಗಿ ಶೂನ್ಯಸಂಪಾದನೆಗಳು ಸಿದ್ಧವಚನಗಳನ್ನು ಬಳಸಿಕೊಂಡು ಸಂವಾದರೂಪದಲ್ಲಿ ಹೆಣೆದ ಹೊಸ ರೀತಿಯ ಸಾಂಸ್ಕೃತಿಕ ಪಠ್ಯಗಳು ಎಂದು ವಿದ್ವಾಂಸರಿಂದ ಕರೆಯಿಸಿಕೊಂಡಿವೆ. “ಶೂನ್ಯಸಂಪಾದನೆ ಆಧುನಿಕ ಮೌಲ್ಯಗಳ ಅರ್ಥದಲ್ಲಿ ಸಂವಾದವನ್ನು ಒಳಗೊಂಡಿರುವ ಪಠ್ಯವಲ್ಲ. 500 ವರ್ಷಗಳ ಹಿಂದೆ ಸಂವಾದರೂಪದ ರಚನೆಯನ್ನು ಕಲ್ಪಿಸಿಕೊಂಡ ಶೂನ್ಯಸಂಪಾದನಾಕಾರರು ಇಂದು ಘನ ವ್ಯಕ್ತಿತ್ವದವರಾಗಿ ಕಂಡು ಬರುತ್ತಾರೆ. ವಚನಕಾರರ ಜೀವನ ಹಾಗೂ ವಚನಗಳ ಮೂಲಕ ಸಾಂಸ್ಕೃತಿಕ ವಿದ್ಯಮಾನವಾಗಿ ಪರಿಣಮಿಸಿರುವ ಶೂನ್ಯ ಸಂಪಾದನೆಯು ಇಂದಿಗೂ ತನ್ನ ಮಹತ್ತರತೆಯನ್ನು ಕಾಯ್ದುಕೊಂಡಿದೆ. ಮುಕ್ತರ ಮಾರ್ಗ ವಚನಗಳನ್ನು ಉತ್ತರ–ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ, ಮರ್ತ್ಯಲೋಕದ ಮಹಾಗಣಂಗಳಿಗೆ ಮಹಾಪ್ರಸಂಗಮಂ ಮಾಡಿಕೊಡುವಂತಹ ಈ ಕೆಲಸವು ನಿಜವಾಗಿಯೂ ಒಂದು ಸೃಜನಶೀಲ ಸಾಹಿತ್ಯದಷ್ಟೇ ಸವಾಲಿನದಾಗಿತ್ತು. ಇದಕ್ಕೆ ಇದ್ದ ಅನುಕೂಲವೆಂದರೆ ವಚನಗಳ ಮುಕ್ತಕ ಸ್ವರೂಪ. ಒಂದು ಅರ್ಥದಲ್ಲಿ ಬಂಧನಕ್ಕೆ ಸಿಗದೆ ಬಹುಮುಖಿಯಾಗಿಯೂ ಸ್ವತಂತ್ರವಾಗಿ ಉಳಿಯುವ ವಚನಗಳ ಸ್ವಾಯತ್ತ ಸ್ವರೂಪದ ಅನುಕೂಲವೆ ಶೂನ್ಯಸಂಪಾದನೆಯ ಸೃಷ್ಟಿಗೆ ಅನುಕೂಲವಾಗಿದೆ. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಗಳಿಸಿರುವ ಶೂನ್ಯ ಸಂಪಾದನೆಗಳು ವಚನ ಸಂಕಲನ ಗ್ರಂಥಗಳಲ್ಲಿಯೇ ಮಹತ್ತರವಾಗಿದ್ದು ಎರಡು ಮತ್ತು ಮೂರನೇ ಭಾಗದಲ್ಲಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ, ತಮ್ಮ ಉದ್ದೇಶಕ್ಕನುಗುಣವಾಗಿ ವಚನಗಳನ್ನು ಸಂಕಲಿಸಿಕೊಂಡಿದ್ದಾರೆ. ಶೂನ್ಯ ಸಂಪಾದನೆಗಳು ಆಕರ, ವಸ್ತು, ವಿನ್ಯಾಸ, ನಿರೂಪಣಾ ಕ್ರಮ, ನಾಟಕೀಯತೆಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಗಳಿಸಿರುವ ಶೂನ್ಯಸಂಪಾದನೆಗಳು ವಚನ ಸಂಕಲನ ಗ್ರಂಥಗಳಲ್ಲಿಯೇ ಮಹತ್ತರವಾದವುಗಳು. ಶರಣರ ವಚನಗಳನ್ನು ನಾಟಕೀಯವಾಗಿ ಹೊಂದಿಸಿ, ಶರಣರ ನಡುವೆ ಸಂಭಾಷಣೆಯು ಏರ್ಪಟ್ಟಿರುವಂತೆ ಕಲ್ಪನೆಯನ್ನು ಮಾಡಿಕೊಂಡು ಈ ಕೃತಿಗಳನ್ನು ರಚಿಸಿದರು.

ಮೊದಲನೆ ಶೂನ್ಯ ಸಂಪಾದನಾಕಾರ ಶಿವಗಣ ಪ್ರಸಾದಿಮಹದೇವಯ್ಯನನ್ನು ಹೊರತು ಪಡಿಸಿ ಉಳಿದ ಶೂನ್ಯಸಂಪಾದನಾಕಾರರು ತುಮಕೂರು ಜಿಲ್ಲೆಯ ಪರಿಸರಕ್ಕೆ ನೇರವಾಗಿ ಸಂಬಂಧ ಪಟ್ಟವರಾಗಿದ್ದಾರೆ. ಶೂನ್ಯಸಂಪಾದನೆಯ ಪರಿಷ್ಕರಣಗಳು ಗೂಳೂರು, ಗುಬ್ಬಿ, ಅದರಂಗಿ ಮತ್ತು ಗುಮ್ಮಳಾಪುರ ಇವುಗಳ ಸುತ್ತಲೇ ಅಂದರೆ ತುಮಕೂರು ಜಿಲ್ಲೆಯ ಪರಿಸರದಲ್ಲಿ ಸೃಷ್ಟಿಯಾದವುಗಳಾಗಿವೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಕೆಂಚವೀರಣ್ಣೊಡೆಯನು ಶೂನ್ಯಸಂಪಾದನೆ ಯನ್ನು ರಚಿಸಿದ್ದಾನೆನ್ನುವ ಎಂ. ಆರ್. ಶ್ರೀನಿವಾಸ ಮೂರ್ತಿ ಅವರ ವಾದವನ್ನು ಮತ್ತೇ ಜೀವಂತಗೊಳಿಸಿವೆ. ಶೂನ್ಯಸಂಪಾದನೆ ಯಂತಹ ಮಹಾ ಪ್ರಸಂಗವೊಂದು ರೂಪುಗೊಂಡಿದ್ದು, ಅನಂತರ ಅದು ಅಂದಿನ ಧಾರ್ಮಿಕ ಅಗತ್ಯಗಳನ್ನು ಪೂರೈಸಲೆಂಬಂತೆ ಹೆಚ್ಚು ಮತೀಯವಾಗಿ ಪರಿಷ್ಕರಣಗೊಂಡಿತು. ಅದು ಮತ್ತೆ ಮಹಾದೇವಯ್ಯನ ದರ್ಶನದ ಜಾಡನ್ನೇ ಹಿಡಿದು ಕಲಾತ್ಮಕತೆಯನ್ನು ಒಳಗೊಳ್ಳುತ್ತಲೇ ತನ್ನ ಪರಿಧಿಯೊಳಕ್ಕೆ ಶರಣರ ಮಹಾದರ್ಶನದ ಎಳೆಗಳನ್ನು ಒಳಗೊಂಡಿತು. ತುಮಕೂರು ಪರಿಸರದ ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಶೂನ್ಯ ಸಂಪಾದನೆಗಳು ಮಹತ್ತರ ಪಾತ್ರವನ್ನು

ವಹಿಸುತ್ತವೆ.

ಗುಮ್ಮಳಾಪುರದ ಸಿದ್ಧಲಿಂಗಯತಿಯು ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಯಲ್ಲಿ ಬರುವ ಮಹತ್ವದ ವಿರಕ್ತ ಕವಿ, ವಚನಕಾರ, ಶೂನ್ಯಸಂಪಾದನೆಯ ಪರಿಷ್ಕರಣಕಾರ. ಇವರು ಶೂನ್ಯಪೀಠದ ಉತ್ತರಾಧಿಕಾರಿಗಳಲ್ಲಿ ಒಬ್ಬರೆಂಬ ನಂಬುಗೆ ಧಾರ್ಮಿಕ ವಲಯದಲ್ಲಿದೆ. ಶಿವಗಣಪ್ರಸಾದಿ ಮಹಾದೇವಯ್ಯನ 'ಶೂನ್ಯ ಸಂಪಾದನೆ'ಯನ್ನು ಹಲಗೆಯಾರ್ಯನ ನಂತರ ಪರಿಷ್ಕರಣ ಮಾಡಿದ್ದು ತೋಂಟದ ಸಿದ್ಧೇಶ್ವರನ ವರಪುತ್ರನೆಂದು ಹೇಳಿಕೊಂಡಿದ್ದಾನೆ. ಕ್ರಿ. ಶ. 1580 ರ ಎಡೆಯೂರು ಶಿಲಾಶಾಸನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳ ಜೊತೆಗೆ ಇದ್ದ ಇತರ ವಿರಕ್ತರುಗಳ ಜೊತೆ ಗುಮ್ಮಳಾಪುರದ ಸಿದ್ಧಲಿಂಗರೂ ಇದ್ದರು ಎಂಬ ವಿವರ ಇದೆ. ಗುಮ್ಮಳಾಪುರದ ಸಿದ್ಧಲಿಂಗದೇವರನ್ನು ವಿರಕ್ತ ತೋಂಟದಾರ್ಯನು ತನ್ನ ಸಿದ್ಧೇಶ್ವರ ಪುರಾಣದಲ್ಲಿ (1616)ವರ್ಣಿಸಿರುವನು. ಸಿದ್ಧನಂಜೇಶನು (ಸು. 1600)'ರಾಘವಾಂಕ ಚಾರಿತ್ರ'ದಲ್ಲಿ ಬಸವಾದಿಗಳ ವಚನಮಂ ಜಂಗಮಕೆ ಮುದದಿಯಾಖ್ಯಾನಮಂ ಪೇಳ್ವೆನೆಂದೂ'ಷಟ್ಥಲಬ್ರಹ್ಮಕೋವಿದ'ನೆಂದೂ ಹೇಳಿರುವನು (ಸಂ. 19. ಪ. 87). ತುಮಕೂರಿನಲ್ಲಿನಡೆದ ತೋಂಟದ ಸಿದ್ಧಲಿಂಗನ ಮೆರವಣಿಗೆಯಲ್ಲಿ ಗುಮ್ಮಳಾಪುರದ ಸಿದ್ಧಲಿಂಗಯತಿ ಭಾಗವಹಿಸಿದ್ದನ್ನು ಹೇಳುತ್ತಾ "ಲಲಿತ ರುದ್ರಾಕ್ಷಿಯಾಭರಣವನಲಂಕರಿಸಿ, ಸಲೆಭಸಿತಮಂ ನೊಸಲೊಳಿಟ್ಟು, ಥಳಥಳಿಸಿಯುಜ್ವಲಿತ ಕೆಂಜೆಡೆಯನೆಳವಿಟ್ಟುತತ್ವಾನುಭಾವಿ'ಯಾಗಿದ್ದನೆಂದು ವರ್ಣಿಸಿದ್ದಾನೆ. ತುಮಕೂರು ಜಿಲ್ಲೆಯಲ್ಲಿ ದೊರೆತ ಜಕ್ಕಣಾರ್ಯ ಸಂಕಲಿತ ಏಕೋತ್ತರ ಶತಸ್ಥಲ ಹಸ್ತಪ್ರತಿಗೆ ಸಂಬಂಧಿಸಿದ ಪುಷ್ಪಿಕೆಯ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಹಾಗೂ ಅದೇ ಕಟ್ಟಿನಲ್ಲಿಯ ಕೊನೆಯ ನಾಲ್ಕುಗರಿಗಳಲ್ಲಿ ವಾರ್ತೆ ಸೋಮಣ್ಣನ 'ಪಂಚೀಕರಣ ಪದಗಳು' ಪರಿವರ್ಧಿನಿಷಟ್ಪದಿಯ ಕೃತಿಯ ಆದಿಯಲ್ಲಿ ಶ್ರೀಗುರು ಗುಮ್ಮಳಾಪುರ ಸಿದ್ಧಲಿಂಗಾಯ ನಮಃ ಎಂದಿದೆ. ತುಮಕೂರು ಜಿಲ್ಲೆಯ ಈ ಹಸ್ತಪ್ರತಿ ಪುಷ್ಪಿಕೆಗಳಲ್ಲಿಯ ಉಲ್ಲೇಖಗಳು ಶೂನ್ಯ ಸಂಪಾದನಾಕಾರ ಗುಮ್ಮಳಾಪುರ ಸಿದ್ಧಲಿಂಗಯತಿಗೂ ತುಮಕೂರು ಜಿಲ್ಲೆಯ ಪರಿಸರಕ್ಕೂ ಇದ್ದ ನಿಕಟ ಸಂಪರ್ಕದ ಬಗೆಗೆ ಹಾಗೂ ತೋಂಟದಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆಯವರು ಎಂಬುವುದಕ್ಕೆ ಪುರಾವೆಯನ್ನು ಒದಗಿಸುತ್ತದೆ. " (ಅದೇ, ಪು. 209)

ಅವರು ತನ್ನನ್ನು,'ತೋಂಟದ ಸಿದ್ಧೇಶನ ಪದಪೀಠಸ್ಥಿತಚಿತ್ರನಿಮ್ಮಳಾಪುರದೀಶು''ಶ್ರೀಮದ್ದೇಶಿಕ ಚಕ್ರವರ್ತಿ' 'ತೋಂಟದ ಸಿದ್ಧೇಶ್ವರನ ವರಪುತ್ರ'' ಎಂದು ಶೂನ್ಯಸಂಪಾದನೆಯ ಸಮಾಪ್ತಿ ಪದ್ಯಗಳಲ್ಲಿ ಕರೆದುಕೊಂಡಿದ್ದಾನೆ. ಇವನ ಗುರುವಾದ ಬೋಳಬಸವೇಶ್ವರನು ಮಹಾನ್ ಶಿವಾನುಭಾವಿ, ವೀರಶೈವ ಸಿದ್ಧಾಂತದಲ್ಲಿ ನಿಷ್ಣಾತ. ಶೂನ್ಯಸಂಪಾದನೆಯಲ್ಲಿ" ಗುಮ್ಮಳಾಪುರದ ಸಿದ್ಧಲಿಂಗಯತಿಯು ತನ್ನ ಬಗೆಗೆ ತೋಂಟದ ಸಿದ್ಧೇಶ್ವರನ ವರಪುತ್ರನಾಗಿ ಜಗಹಿತಾರ್ಥವಾಗಿ ಗುಮ್ಮಳಾಪುರದ ಸಿದ್ಧಲಿಂಗದೇವರೆಂಬ ನಾಮವಿಡಿದು ಮತ್ತು ಶ್ರೀಮದ್ದೇಶಿಕ ಚಕ್ರವರ್ತಿಯೆನಿಪಾ ಸತ್ಕೀರ್ತಿಕಾಂತಂ ಬುಧಸ್ತೋಮಾಂಬೋನಿಧಿ ಪೂರ್ಣಚಂದ್ರನನಿಶನ ಶ್ರೀತೋಂಟದಾರ್ಯಂಗೆ ಪೇಳ್ದನೊಲವಿಂದೀ ಶೂನ್ಯಸಂಬೋದೆಯಂ (ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯ ಸಂಪಾದನೆ, ಪು. 512) ಎಂದು ಹಾಗೂ ಕೃತಿಯ ಕೊನೆಯಲ್ಲಿ ಅನಾದಿ ಪರಶಿವ ತಾನೆ ತೋಂಟದ ಸಿದ್ಧೇಶ್ವರದೇವರ ದಿವ್ಯಶ್ರೀಪಾದಕ್ಕೆ ಸಮರ್ಪಿಸಿದ ಶೂನ್ಯ ಸಂಪಾದನೆ ಎಂದು ಹೇಳಿಕೊಂಡಿದ್ದಾನೆ." (ಶರಣ ಸಾಹಿತ್ಯ ದೀಪಿಕೆ, ಸಿ. ನಾಗಭೂಷಣ ಪು. 209)

ಇವನ ಕಾಲದ ವಿಚಾರವಾಗಿ ಅನೇಕ ವಿದ್ವಾಂಸರು ಚರ್ಚಿಸಿರುವರು. ಎಡೆಯೂರಿನ ಸಿದ್ಧಲಿಂಗೇಶ್ವರನ ದೇವಸ್ಥಾನದಲ್ಲಿರುವ ದಾನ ಶಾಸನದಲ್ಲಿ ಉಕ್ತವಾಗಿರುವ ಇವನ ಹೆಸರಿನಿಂದಾಗಿ ಇವನು ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿದ್ದನೆಂದು ಊಹಿಸಲಾಗಿದೆ. ಇವರ ಶೂನ್ಯಸಂಪಾದನೆಯನ್ನು ಕ್ರಿ. ಶ. 1580ರಲ್ಲಿ ಯಳಂದೂರು ಚೆನ್ನರಾಜನು ವಿರಕ್ತ ಸಿದ್ಧಲಿಂಗನಿಗೆ ಪ್ರತಿಮಾಡಿಸಿ ಅರ್ಪಿಸಿರುವನು. ಈ ಹಿನ್ನೆಲೆಯಲ್ಲಿ ಈತನು 16ನೇ ಶತಮಾನದ ಉತ್ತರಾರ್ಧದಲ್ಲಿದ್ದನೆಂಬುದು ಸ್ಪಷ್ಟ. ಶಾಂತೇಶನ – ಸಿದ್ಧೇಶ್ವರ ಪುರಾಣ'ದ ರಚನೆಯ ಸಮಾಪ್ತಿ

ಕಾಲದಲ್ಲಿ ಅಂದರೆ ಕ್ರಿ. ಶ. 16ನೇ ಶತಮಾನದ ಮಧ್ಯಭಾಗದಲ್ಲಿ ಸಿದ್ಧಲಿಂಗೇಶ್ವರರು ಜೀವಿಸಿದ್ದರೆಂದು ಹೇಳಲವಕಾಶವಿರುವದರಿಂದ, ಗುಮ್ಮಳಾಪುರದ ಸಿದ್ಧಲಿಂಗದೇವ ಇವರ ಶಿಷ್ಯನಾಗಿರುವದರಿಂದ ಮೂರನೆಯ ಮತ್ತು ನಾಲ್ಕನೆಯ ಶೂನ್ಯಸಂಪಾದನೆಗಳ ಕಾಲ 16ನೇ ಶತಮಾನದ ಉತ್ತರಾರ್ಧವೆಂದು ಇಲ್ಲಿ ಅಂಗೀಕರಿಸಲಾಗಿದೆ ಎಂದು ಎಸ್. ಶಿವಣ್ಣನವರು ಅಭಿಪ್ರಾಯ ಪಟ್ಟಿರುವರು.

ಎಸ್. ಶಿವಣ್ಣರವರು ಹೇಳುವಂತೆ "ಜಗುನಿ ಮರುಳಾರ್ಯನ ಸ್ವರಚಿತ ಕೃತಿ, ಮರುಳದೇವರ ಸ್ವರವಚನವನ್ನು'ನಿಜಗುರು ಸಿದ್ಧಶಾಂತ' ಅಂಕಿತದಲ್ಲಿ ರಚಿಸಿದ್ದಾನೆ. ಈ ಸ್ವರವಚನದಲ್ಲಿ ಸಿದ್ಧಲಿಂಗನ ವರ್ಣನೆ ಬಂದಿದೆ. ಈ ಹಾಡಿನಿಂದ ವಿರಕ್ತಸಿದ್ಧಲಿಂಗನು ಜಿಗುನಿಮರುಳಾರ್ಯನು ಸಮಕಾಲೀನರೆಂಬ ಅಂಶ ವ್ಯಕ್ತವಾಗುತ್ತದೆ. ಇಲ್ಲಿ ಉಲ್ಲೇಖಗೊಂಡಿರುವ ಈತನ ಕಾಲದ ಬಗೆಗೆ ಶೂನ್ಯಸಂಪಾದನೆಯ ಓಲೆ ಪ್ರತಿಯೊಂದರ ಅಂತ್ಯೋಲ್ಲೇಖ ಬೆಳಕನ್ನು ಬೀರುತ್ತದೆ. ಇದರಿಂದ ಗುಮ್ಮಳಾಪುರದಸಿದ್ಧಲಿಂಗಯತಿಗಳ ಕಾಲ ಕ್ರಿ. ಶ. 1580 ಆಗುತ್ತದೆ." ಎಂದಿರುವರು. ಡಾ. ಎಂ. ಚಿದಾನಂದಮೂರ್ತಿಯವರು ಈತನಕಾಲ ಕ್ರಿ. ಶ. 1583 ಎಂದಿರುವರು. "ಇನ್ನೂ ಸಮರ್ಥನೀಯ ಆಕರಗಳು ದೊರೆಯುವವರೆಗೂ ಗುಮ್ಮಳಾಪುರ ಸಿದ್ಧಲಿಂಗನ ಕಾಲ 1560 ರಿಂದ 1580 ಎಂದು ಇಟ್ಟುಕೊಳ್ಳಬಹುದಾಗಿದೆ. ಈತ ವಚನಕಾರನೂ ಆಗಿದ್ದು 'ಬೋಳಬಸವೇಶ್ವರ ನಿಮ್ಮ ಧರ್ಮ, ನಿಮ್ಮ ಧರ್ಮ" ಎಂಬ ಅಂಕಿತದಲ್ಲಿ ತನ್ನ ವಚನಗಳನ್ನು ಬರೆದಿದ್ದು ಸದ್ಯಕ್ಕೆ 18 ವಚನಗಳು ಲಭ್ಯವಿವೆ.

ಇಲ್ಲಿಯವರೆಗೆ ಪ್ರಕಟವಾಗಿರುವ ಶೂನ್ಯಸಂಪಾದನೆಗಳಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯ ನವರ ಶೂನ್ಯಸಂಪಾದನೆಯೇ ಮೊಟ್ಟಮೊದಲನೆಯ ಶೂನ್ಯಸಂಪಾದನೆಯಾಗಿದೆ. ಇದರ ಕಾಲ ಸುಮಾರು 1420. ಎರಡನೆಯದು ಹಲಗೆಯ ದೇವರ ಶೂನ್ಯಸಂಪಾದನೆ ಕ್ರಿ. ಶ. 1490ರಲ್ಲಿ ರಚಿತವಾಗಿರಬಹುದಾದ ದ್ವಿತೀಯ ಸಂಪಾದನೆ. ಕ್ರಿ. ಶ. 1580ರಲ್ಲಿ ರಚನೆಯಾದ ಗುಮ್ಮಳಾಪುರ ಸಿದ್ಧಲಿಂಗ ಯತಿಗಳ ರಚನೆ ತೃತಿಯ ಶೂನ್ಯ ಸಂಪಾದನೆ. ಕ್ರಿ. ಶ. 1616ರಲ್ಲಿ ರಚನೆಯಾದ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಚತುರ್ಥ ಶೂನ್ಯ ಸಂಪಾದನೆಯಾಗಿದೆ. ಗುಮ್ಮಳಾಪುರದ ಸಿದ್ಧಲಿಂಗಯತಿಗಳ ಶೂನ್ಯಸಂಪಾದನೆಯನ್ನು ಆರ್. ಸಿ. ಹಿರೇಮಠ ಅವರು ಸಂಪಾದಿಸಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ 1972 ರಲ್ಲಿ ಪ್ರಕಟಿಸಿದರು. ನಂತರದಲ್ಲಿ ಸೊಂಡೂರಿನ ಪ್ರಭುದೇವರ ಜನಕಲ್ಯಾಣ ಸಂಸ್ಥೆಯ ಮೂಲಕ 2021 ರಲ್ಲಿ ಕೆ. ರವೀಂದ್ರನಾಥ ಮತ್ತು ಪ್ರಕಾಶ ಗಿರಿಮಲ್ಲನವರ ಸಂಪಾದಕತ್ವದಲ್ಲಿ ಪುನರ್ ಮುದ್ರಣಗೊಂಡಿದೆ.

ವಚನಗಳನ್ನು ಆಧರಿಸಿ ಹುಟ್ಟಿಕೊಂಡ ಏಕೋತ್ತರಶತಸ್ಥಲಗಳಂಥ ಸಂಕಲನಗಳು ತಾತ್ವಿಕ ಪಠ್ಯಗಳಾದರೆ; ಶೂನ್ಯಸಂಪಾದನೆಗಳು ಅನುಭಾವಿಕ ಪಠ್ಯಗಳೆಂಬುದನ್ನು ಅವಶ್ಯವಾಗಿ ನಾವು ಗಮನಿಸಬೇಕಾಗಿದೆ. ಮುಂದೆ ಈ ಅನುಭಾವ ಸಂಸ್ಕೃತಿಯನ್ನು ಪರಂಪರೆಯಂತೆ ನಿರೂಪಿಸಿದವರು ಹಲಗೆಯಾರ್ಯ, ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಾದ ಗುಮ್ಮಳಾಪುರದ ಸಿದ್ಧಲಿಂಗದೇವರು, ಗೂಳೂರು ಸಿದ್ಧವೀರಣ್ಣೊಡೆಯರು. ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯ ಕೃತಿಯ ಆರಂಭದಲ್ಲಿ ಬರುವ ಶ್ರೀ ಮತ್ಸಕಲಜಗದಾಚಾರ್ಯರುಮಪ್ಪ, ಅಲ್ಲಮ ಪ್ರಭುದೇವರು, ಬಸವರಾಜ ದೇವರು, ಚೆನ್ನಬಸವರಾಜ ದೇವರು ಮುಖ್ಯವಾದ ಅಸಂಖ್ಯಾತ ಮಹಾ ಗಣಗಳನೊಡನೆ ಮಹಾನುಭಾವ ಪ್ರಸಂಗಮಂ ಮಾಡಿದ ಸರ್ವಕರಣ ಶೂನ್ಯಸಂಪಾದನೆಯ ಸದ್ಗೋಷ್ಠಿ ಕಥಾ ಪ್ರಸಂಗಮಂ ಮುಕ್ತಕಮಾಗಿರ್ದ ಶಿವಾದ್ವೈತ ವಚನಗಳಿಂ ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ ಶಿವಗಣ ಪ್ರಸಾದಿ ಮಹಾದೇವಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಆ ಮಹಾಪ್ರಸಂಗಮಂ ಸಮರ್ಪಿಸಿದ ಭೇದವೆಂತಿರ್ದುದೆಂದಡೆ ಎಂಬ ವಿವರಣೆಯಲ್ಲಿ ಶೂನ್ಯ ಸಂಪಾದನಾ ಸಂಕಲನ ಗ್ರಂಥ ಹೊರಬಂದ ಆಶಯ ವ್ಯಕ್ತವಾಗಿದೆ. ನಾಲ್ಕು ಶೂನ್ಯಸಂಪಾದನೆಗಳ ಪರಿಷ್ಕರಣಗಳಿಗೆ ಕಾರಣವೇನಿರಬಹುದು ಎಂಬ ಪ್ರಶ್ನೆಗಳಿಗೆ ಅವರವರ ಕೃತಿಗಳಲ್ಲಿಯೇ ಸಂಪಾದನಕಾರರು ಹೇಳಿಕೊಂಡಿರುವ ಹೇಳಿಕೆಗಳು, ಅಲ್ಲಿಯ ವಸ್ತು ಸಂಗತಿಗಳಿಗೆ ಮಾಡಿಕೊಂಡ ಬದಲಾವಣೆಗಳು ಉತ್ತರಿಸುತ್ತವೆ. ಶಿವಗಣ ಪ್ರಸಾದಿ ಮಹಾದೇವಯ್ಯನ ಕೃತಿಯ ನಂತರ

ನಿರ್ಮಾಣವಾದ ಕೃತಿಗಳು ಏನಿದ್ದರೂ ಆ ಮೂಲವನ್ನೇ ಆಧರಿಸಿ ಅಲ್ಪ ಸ್ವಲ್ಪ ಬದಲಾವಣೆ ಹಾಗೂ ಕೆಲವು ಹೊಸ ಪ್ರಸಂಗಗಳು ಅಳವಡಿಸಲ್ಪಟ್ಟ ಪರಿಷ್ಕರಣಗಳಾಗಿವೆ. ಮಹಾದೇವಯ್ಯನ ಮೂಲಕೃತಿ ನಂತರದ ನಾಲ್ವರು ಸಂಕಲನಕಾರರಿಂದ ಪರಿಷ್ಕರಣಗೊಳ್ಳಲು ಬಹುಮುಖ್ಯ ಕಾರಣ ಸಿದ್ಧರಾಮಯ್ಯ ದೀಕ್ಷಾ ಪ್ರಸಂಗ. ಇದರ ಜೊತೆಗೆ ಅಲ್ಲಮ ಕಾಮಲತೆಯರ ಪ್ರಸಂಗ, ಅಕ್ಕ ಕೌಶಿಕರ ಸಂಬಂಧ, ಕಿನ್ನರಯ್ಯನ ಪ್ರಸಂಗ, ಮತ್ತು ಕಾಲ ಕಾಲಕ್ಕೆ ಸಂಕಲನಗೊಂಡ ನಂತರದ ಶೂನ್ಯ ಸಂಪಾದನೆಗಳಲ್ಲಿ ಕೆಲವು ಸನ್ನಿವೇಶಗಳು ಹೊಸದಾಗಿ ಸೇರ್ಪಡೆಯಾಗಿವೆ. ಶೂನ್ಯ ಸಂಪಾದನಾ ಸಂಕಲನ ಕೃತಿಗಳಲ್ಲಿ ಹೆಚ್ಚಿನ ಶರಣರ ವಚನಗಳು ಸಂದರ್ಭಕ್ಕನುಸಾರವಾಗಿ ಸೇರಲ್ಪಟ್ಟಿವೆ.

ಲಭ್ಯವಿರುವ ನಾಲ್ಕು ಶೂನ್ಯಸಂಪಾದನೆಗಳು ಕೇವಲ ಪ್ರದರ್ಶನಗೊಳ್ಳದೆ ಕಾಲಕಾಲಕ್ಕೆ ಪರಿಷ್ಕರಣೆಗೊಂಡು ಪ್ರಯೋಗಕ್ಕೆ ಒಳಗಾದವುಗಳು. ಮೂಲಶೂನ್ಯಸಂಪಾದನೆಯ ಒಟ್ಟು ಆಶಯಕ್ಕೆ ಚ್ಯುತಿಬಾರದಂತೆ ಶರಣ ತತ್ವ, ಶರಣರಚರಿತ್ರೆ, ವಿಶೇಷವಾಗಿ ಸಂಪಾದಕರ ಅಭಿರುಚಿಯನ್ನು ಪ್ರತಿನಿಧಿಸುವ ಕಾರಣದಿಂದ ಶೂನ್ಯಸಂಪಾದನೆಗಳು ವಚನಕಾರರ ಆತ್ಮಮುಖಿ ಮತ್ತು ಸಮಾಜಮುಖಿ ಅಧ್ಯಯನಗಳಾಗಿವೆ. ಈ ಸಂಪಾದನೆಗಳ ಮೂಲ ಜನಕ ಶಿವಗಣಪ್ರಸಾದಿ ಮಹಾದೇವಯ್ಯ. ಶತಶತಮಾನದಲ್ಲಿ ಅಡಗಿಹೋದ ವಚನಗಳನ್ನು ಹುಡುಕಿ, ಸಂಗ್ರಹ, ಸಂಕಲನ, ಸಂಪಾದನೆಗಳ ಮೂಲಕ ಕೂಡಿಟ್ಟಿರುವುದು ಮಹತ್ತರವಾದ ಸಂಗತಿಯಾಗಿದೆ. ಸಂಪಾದನಾಕಾರರ ಆ ಪ್ರಯತ್ನದಿಂದಾಗಿ ನಮಗಿಂದು ಸಿಕ್ಕಿರುವ ವಚನಗಳು ಅಲ್ಪವೆನಿಸಿದರೂ ಸಹ, ಅವರ ಪ್ರಯತ್ನವಿಲ್ಲದಿದ್ದರೆ ಇಷ್ಟೂ ವಚನಗಳು ನಮಗೆ ದೊರಕುತ್ತಿರಲಿಲ್ಲವೆಂದು ಹೇಳಬಹುದು. ಆ ಕಾರಣವಾಗಿ ಶೂನ್ಯ ಸಂಪಾದನಾಕಾರರನ್ನು ಒಳಗೊಂಡಂತೆ ಸಂಗ್ರಹ, ಸಂಕಲನ, ಸಂಪಾದನಾಕಾರರಿಗೆ ನಾವು ಇಂದು ಋಣಿಯಾಗಿರ ಬೇಕಾಗಿದೆ. ಒಂದು ರೀತಿಯಲ್ಲಿ ಕೇಂದ್ರೀಯ ರೂಪದಲ್ಲಿದ್ದ ಕಲ್ಯಾಣದ ಅನುಭವ ಮಂಟಪದಲ್ಲಿಯ ವಚನಸಾಹಿತ್ಯದ ಆಶಯವನ್ನು ಎಡೆಯೂರು, ಗುಬ್ಬಿ, ಗೂಳೂರು, ಶಿವಗಂಗೆ ಮುಂತಾದ ಕಡೆ ವಿಕೇಂದ್ರೀಕರಣಗೊಳಿಸಿದ ಕೀರ್ತಿ ಶೂನ್ಯಸಂಪಾದನಾಕಾರರಿಗೆ ಸಲ್ಲುತ್ತದೆ.

ಶೂನ್ಯಸಂಪಾನೆಯು ಪರಿಷ್ಕರಣಗಳಲ್ಲಿ ಹೊಸ ಹೊಸ ಪ್ರಸಂಗಗಳು ಕೂಡಿಕೊಂಡು, ಜೊತೆಜೊತೆಯಲ್ಲಿಯೇ ಮೂಲದಲ್ಲಿದ್ದ ಪ್ರಸಂಗಗಳು ಅರ್ಥಪೂರ್ಣವಾಗಿ ಗುಮ್ಮಳಾಪುರದ ಸಿದ್ಧಲಿಂಗಯತಿಗಳ ಶೂನ್ಯಸಂಪಾದನೆಯಲ್ಲಿ ಮೂಡಿಬಂದಿದೆ. ಶೂನ್ಯವನ್ನು ಸಂಪಾದಿಸಿದ ಹಲವು ಶರಣರ ಚರಿತ್ರೆಗಳು ಶೂನ್ಯ ಸಂಪಾದನೆಯಲ್ಲಿ ಕಾಣಬರುತ್ತವೆ. ಶೂನ್ಯ ಸಂಪಾದನೆಯಲ್ಲಿ ಅಲ್ಲಮಪ್ರಭುವೇ ಕೇಂದ್ರ ವ್ಯಕ್ತಿಯಾದ್ದರಿಂದ ಶೂನ್ಯ ಸಂಪಾದನೆಗೆ ಪ್ರಭುದೇವರ ಶೂನ್ಯ ಸಂಪಾದನೆ ಎಂಬ ಪರ್ಯಾಯ ಹೆಸರು ಉಂಟು. ಅಲ್ಲಮಪ್ರಭು ತನ್ನ ಜೀವಿತದುದ್ದಕ್ಕೂ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿದವನು. ನಿಜವಾಗಿಯೂ ಜ್ಞಾನಿಯಾಗಿದ್ದರೂ ಅಣ್ಣನ ಸಾವಿನಿಂದ ಜರ್ಝರಿತವಾಗಿ ಶೋಕಿಸುತ್ತಿದ್ದ ಮುಕ್ತಾಯಕ್ಕ, ಕೇವಲ ಲೌಕಿಕ ಕಾಯಕದಲ್ಲಿಯೆ ತಲ್ಲೀನನಾಗಿ ಅದರಾಚೆಯ ಪರವಸ್ತುವನ್ನು ಅಲಕ್ಷಿಸಿದ್ಧ ತೋಟಿಗಗೊಗ್ಗಯ್ಯ, ಕಾಯಕ ಯೋಗಿ ಸಿದ್ಧರಾಮ, ಅಧ್ಯಾತ್ಮ ಸಾಧನೆಯಲ್ಲಿ ಉನ್ನತ ಹಂತವನ್ನು ಮುಟ್ಟಿದ್ದ. ಆದರೆ ಬಹುಜನರಿಗೆ ಅಜ್ಞಾತವಾಗಿದ್ದ ಮರುಳಶಂಕರದೇವ, ಗೋರಕ್ಷ, ಅಕ್ಕಮಹಾದೇವಿ ಇತ್ಯಾದಿ ಶರಣ ಶರಣೆಯರು ಅಲ್ಲಮನೊಡನೆ ಸಂಭಾಷಿಸಿ ಆತನ ಜ್ಞಾನದ ಬೆಳಕಿನಲ್ಲಿ ತಮ್ಮ ಅರಿವಿನ ಮಾರ್ಗವನ್ನು ಕೈಗೊಂಡು ಶೂನ್ಯವನ್ನು ಸಂಪಾದಿಸಿಕೊಂಡ ವಿವರವೇ ಶೂನ್ಯ ಸಂಪಾದನೆಯಲ್ಲಿ ಪ್ರಮುಖ ಭಾಗವಾಗಿದೆ. ಶೂನ್ಯಸಂಪಾದನೆಯಲ್ಲಿ ಬರುವ ಪಾತ್ರಗಳೆಲ್ಲವೂ ಶಿವಶರಣರ ಪಾತ್ರಗಳಾಗಿವೆ. ಅಲ್ಲದೇ ಅವುಗಳನ್ನು ಅವರ ವಚನಗಳ ಮೂಲಕವೇ ಚಿತ್ರಿಸಿದ್ದಾರೆ. ಪಾತ್ರಗಳ ವ್ಯಕ್ತಿತ್ವ, ಮೂಲವಾದ ಘಟನಾವಳಿ, ಸನ್ನಿವೇಶಗಳ ಮೂಲಕ ಕಲಾಕೃತಿ ಕಥಾವಸ್ತು ರೂಪ ತಾಳುತ್ತದೆ. ಸೀಮಿತ ಪಾತ್ರ ಸಂಖ್ಯೆಯಂತೆಯೇ ಆಯ್ದ ಸನ್ನಿವೇಶಗಳ ಮೂಲಕ ಕಥೆಯ ಸಾಂದ್ರತೆ ಇನ್ನೂ ಯಶಸ್ವಿಯಾಗಿ ಫಲಿಸುತ್ತದೆ. ಶೂನ್ಯ–ಸಂಪಾದನೆಯು ಒಂದು ಅನುಭಾವ ಕೃತಿಯಾಗಿರುವುದರಿಂದ ಇಲ್ಲಿ ಪಾತ್ರಗಳ ಚಿತ್ರಣಕ್ಕಿಂತ ತತ್ತ್ವಪ್ರತಿಪಾದನೆಯು ಮುಖ್ಯವಾಗಿದೆ. ಇಲ್ಲಿ ಹಲವು ಶರಣರ ಪಾತ್ರಗಳು ಕಾಣಿಸಿಕೊಳ್ಳಬೇಕಾದುದರಿಂದ ಅವುಗಳ ಗಾತ್ರ ಚಿಕ್ಕದಾಗಿ ಕಾಣುತ್ತದೆ.

ಪಾತ್ರಗಳ ಚಟುವಟಿಕೆಗೆ ಸಂಪೂರ್ಣ ಅವಕಾಶವನ್ನು ಕೊಟ್ಟಿಲ್ಲವಾದರೂ, ಪರಿಮಿತ ಅವಕಾಶದಲ್ಲಿಯೇ ಪೂರ್ಣಪ್ರಮಾಣದ ಚಿತ್ರಗಳನ್ನು ಕೊಡಲು ಸಾಧ್ಯವಿಲ್ಲವೆಂಬ ಹಿನ್ನೆಲೆಯಲ್ಲಿಯೇ ಶೂನ್ಯಸಂಪಾದನೆಯ ಪಾತ್ರಗಳನ್ನು ಪರಿಗಣಿಸಬೇಕಾಗುತ್ತದೆ.

ಗುಮ್ಮಳಾಪುರದ ಸಿದ್ಧಲಿಂಗದೇವರು ತಮ್ಮ ಶೂನ್ಯ ಸಂಪಾದನೆಯ ಪರಿಷ್ಕರಣದಲ್ಲಿ 39 ವಚನಕಾರರ ಒಟ್ಟು 1337 ವಚನಗಳು ಮತ್ತು 18 ಸ್ವರ ವಚನಗಳನ್ನು ಅಳವಡಿಸಿಕೊಂಡಿದ್ದಾರೆ. ಈ ಶೂನ್ಯ ಸಂಪಾದನೆಯು ಅಧ್ಯಾಯಗಳಲ್ಲಿ ವಿನ್ಯಾಸ ಗೊಂಡಿದೆ. ಆರಂಭದಲ್ಲಿ ಸ್ಥಲಗಳಿವೆ. ಈ ಶೂನ್ಯಸಂಪಾದನೆಯಲ್ಲಿಯ ಅನ್ಯರ ವಚನಗಳ ಆಧಾರದಿಂದ, ಸಂವಾದಶೈಲಿಯಿಂದ, ಪ್ರಭುದೇವರ ಸುತ್ತ ಹೆಣೆದುಕೊಂಡಿರುವುದರಿಂದ ಸನ್ನಿವೇಶ, ದೃಶ್ಯಾವಳಿಯ ಲಕ್ಷಣ, ಸಂಗತಿಗಳ ನಿರೂಪಣಾ ಶೈಲಿ, ಗದ್ಯ ಪ್ರಾಧಾನ್ಯತೆಯ ಬಗೆಗೆ ಈಗಾಗಲೇ ಅಧ್ಯಯನ ನಡೆದಿದೆ.

ಗುಮ್ಮಳಾಪುರದ ಸಿದ್ಧಲಿಂಗದೇವರು ''ತನ್ನ ಶೂನ್ಯಸಂಪಾದನೆಯಲ್ಲಿ 19 ಅಧ್ಯಾಯಗಳನ್ನು ಮಾಡಿಕೊಂಡು ಅವುಗಳಿಗೆ ಸಂಪಾದನೆಯೆಂದು ಕರೆದಿದ್ದಾರೆ. ಅವುಗಳು ಈ ಕೆಳಕಂಡಂತಿವೆ. 1. ಪ್ರಥಮೋಪದೇಶ 2. ಮುಕ್ತಾಯಕ್ಕಗಳ ಸಂಪಾದನೆ 3. ಸಿದ್ಧರಾಮಯ್ಯಗಳ ಸಂಪಾದನೆ 4. ಬಸವೇಶಚೆನ್ನಬಸವೇಶಂಗನುಗ್ರಹ ಮಾಡಿದ ಸಂಪಾದನೆ 5. ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ 6. ಮಡಿವಾಳಯ್ಯಗಳ ಸಂಪಾದನೆ 7. ಸಿದ್ಧರಾಮಯ್ಯದೇವರ ಗುರುಕರುಣ 8. ಮರುಳಶಂಕರ ದೇವರ ಸಂಪಾದನೆ, 9. ಪ್ರಭುದೇವರ ಪೂಜಾಸ್ತುತಿ 10. ಬಸವೇಶ್ವರನ ಸಂಪಾದನೆ 11. ಚನ್ನಬಸವೇಶ್ವರನ ಸಂಪಾದನೆ 12. ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, 13. ನುಲಿಯ ಚಂದಯ್ಯಗಳ ಸಂಪಾದನೆ 14. ಮಹಾದೇವಿಯಕ್ಕಗಳ ಸಂಪಾದನೆ 15. ಪ್ರಭುದೇಶಾಂತರ ಹೋಗಿ ಬಂದ ಸಂಪಾದನೆ 16. ಪ್ರಭುದೇವರುಶೂನ್ಯಸಿಂಹಾಸನವೇರಿದ ಸಂಪಾದನೆ 17. ಪ್ರಭುದೇವರ ಆರೋಗಣೆ 18. ಶರಣರ ಅವಸಾನ ಪರಾಮರಿಕೆ 19. ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ.

ಸಿದ್ಧಲಿಂಗ ದೇವರ ಶೂನ್ಯಸಂಪಾದನೆಯ ವೈಶಿಷ್ಟ್ಯ ಎಂದರೆ, ಇಲ್ಲಿಯ ಪ್ರತಿಯೊಂದು ಅಧ್ಯಾಯದ ಪ್ರಾರಂಭದಲ್ಲಿ ಹಿಂದಿನ ಅಧ್ಯಾಯದಲ್ಲಿ ನಡೆದಿರುವ ಸನ್ನಿವೇಶದ ಚಿತ್ರವನ್ನು ಕೊಟ್ಟು, ಈ ಅಧ್ಯಾಯಕ್ಕೆ ಕೊಂಡಿಯನ್ನು ಹಾಕುವ ರೀತಿಯಲ್ಲಿ ಗದ್ಯವನ್ನು ಬಳಸಿರುವುದು. 'ಸಿದ್ಧರಾಮಯ್ಯಗಳ ಸಂಪಾದನೆ'ಯಲ್ಲಿ ''ಇಂತು ಮುಕ್ತಾಯಕ್ಕಗಳ ಪ್ರತಾಪಮಂ ನಿಲಿಸಿ, ಮಹಾನುಭಾವಮಂ ಬೋಧಿಸಿ, ಅಜಗಣ್ಣ ದೇವರ ನಿಲವನು ಆಕೆಯ ಸರ್ವಾಂಗದೊಳು ಪ್ರತಿಷ್ಠಿಸಿ ತೋರಿ, ನಿರವಯಲಸಮಾಧಿಯೊಳು ನಿಲಿಸಿದ ಪ್ರಭುದೇವರು ಅಲ್ಲಿಂದ ಸಿದ್ಧರಾಮಯ್ಯದೇವರ ದರುಶನವಾಗಬೇಕೆಂಬ ಕೃಪೆಯಿಂ ಸೊನ್ನಲಿಗೆಯ ಪುರಕ್ಕೆ ಬಿಜಯಂಗೈದಲ್ಲಿ, ಎನ್ನುವಲ್ಲಿ ಹಿಂದಿನ ಅಧ್ಯಾಯದಲ್ಲಿ ಅಲ್ಲಮಪ್ರಭುವು ನೊಂದ ಮುಕ್ತಾಯಕ್ಕನಿಗೆ ಸಂತೈಸಿ, ಅವಳನ್ನು ಮುಕ್ತಿಮಾರ್ಗದ ಕಡೆಗೆ ಸಾಧನೆಗೆ ಹಚ್ಚಿ ಸೊನ್ನಲಾಪುರಕ್ಕೆ ಬರುವುದನ್ನು ತಿಳಿಸುವ ಈ ಗದ್ಯವು ಓದುಗನಿಗೆ ಮಾರ್ಗದರ್ಶಕದಂತಿದೆ. (ಅದೇ, ಪು. 43) ಅದೇ ರೀತಿ ಕೊನೆಯದಾದ ಅಧ್ಯಾಯ'ಗೋರಕ್ಷನಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ'ದಲ್ಲಿ ''ಇಂತು ಬಸವರಾಜದೇವರು ಚೆನ್ನಬಸವರಾಜದೇವರು, ಮಡಿವಾಳಮಾಚಿತಂದೆಗಳು ಮೊದಲಾದ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ತಮ್ಮ ನಿಜಪದದ ನಿಜೈಕ್ಯಮಂ ಪೇಳಲು, ಪ್ರಭುದೇವರು ಕೇಳ್ದು ತಮ್ಮ ನಿಜಪದಮಂ ಪೇಳು, ಮತ್ತೆಲ್ಲಾ ಅಸಂಖ್ಯಾತರಿಗೆ ನಿರ್ವಾಹ ಸ್ಥಿತಿಗತಿಯ ನಿರೂಪಿಸುತ್ತಿರ್ದರದೆಂತೆಂದಡೆ (ಅದೇ, ಪು. 489). ಇಲ್ಲಿ ಹಿಂದಿನ ಅಧ್ಯಾಯದಲ್ಲಿ ಅಲ್ಲಮಪ್ರಭುವು ಶರಣರೊಂದಿಗೆ ನಡೆಸಿದ ನಿಜದರಿವಿನ ಅನುಭಾವ ಗೋಷ್ಠಿಯನ್ನು ಮುಗಿಸಿಕೊಂಡು ಮುಂದೆ ಸಾಗುತ್ತಾ, ನಿರ್ವಯಲ ಸ್ಥಿತಿಯನ್ನು ತಿಳಿಸಲು ಮುಂದಾಗುವುದನ್ನು ಮತ್ತು ವಚನಗಳಿಗೆ ಸಂಪರ್ಕವನ್ನು ಸಾಧಿಸುವ ಕೆಲಸವನ್ನು ಮಾಡುವುದರ ಮೂಲಕ, ಸಹೃದಯನಿಗೆ ಸ್ಪಷ್ಟವಾದ ಚಿತ್ರಣವು ದೊರೆಯುವಂತೆ ಮಾಡಿದ್ದಾರೆ. ಸಂಪರ್ಕಗದ್ಯಗಳಿಲ್ಲದಿದ್ದರೇ ಓದುಗನಿಗೆ ಸಂದರ್ಭ, ಸನ್ನಿವೇಶ, ವಿಷಯದ ಹೊಂದಾಣಿಕೆಯ ಗೊಂದಲವುಂಟಾಗುತ್ತಿತ್ತು. ಅದನ್ನರಿತ ಇವರು ಸಂಪರ್ಕ ಗದ್ಯದ ಮೂಲಕ ಗೊಂದಲಕ್ಕೆ ಎಡೆಮಾಡಿ ಕೊಡುವುದಿಲ್ಲ. ಗುಮ್ಮಳಾಪುರದ ಸಿದ್ಧಲಿಂಗಯತಿಗಳು ಬಳಸಿರುವ ಸಂಪರ್ಕ ಗದ್ಯಗಳಲ್ಲಿ ಕೆಲವೊಂದು

ದೀರ್ಘ ಗದ್ಯವನ್ನು ಬಳಸಿದ್ದಾನೆ, ಕೆಲವು ಕಡೆ ಒಂದೇ ವಾಕ್ಯ ಅಥವಾ ಎರಡು, ಮೂರು ಶಬ್ದಗಳಲ್ಲಿ ಸಂಪರ್ಕ ಗದ್ಯವನ್ನು ಬಳಸಿ ಸನ್ನಿವೇಶದ ಮುನ್ನಡೆಗೆ ಕಾರಣನಾಗಿದ್ದಾನೆ. ಶೂನ್ಯಸಂಪಾದನೆಯ ಕೊನೆಯ ಸಮಾಪ್ತಿ ವಾಕ್ಯದ ಗದ್ಯವನ್ನು ಹೇಳಿದ ನಂತರ ಒಂದು ವೃತ್ತವನ್ನು ಹೇಳಿ, ಕೊನೆಯಲ್ಲಿ ಒಂದು ಕಂದ ಪದ್ಯವನ್ನು ಹೇಳುವ ಮೂಲಕ ಕೃತಿಯನ್ನು ಸಮಾಪ್ತಿಗೊಳಿಸುತ್ತಾರೆ. ಈ ಶೂನ್ಯಸಂಪಾದನೆಯಲ್ಲಿ ಬಂದಿರುವ ಕಂದ ವೃತ್ತಗಳು ಶೂನ್ಯ –ಸಂಪಾದನಾಕಾರನ ಕವಿತಾ ರಚನೆಯ ಸಾಮರ್ಥ್ಯಕ್ಕೆ ನಿದರ್ಶನಗಳಾಗಿವೆ ಎಂದು ಹೇಳಬಹುದು.

ಇಂದು ನಾಲ್ಕು ಶೂನ್ಯಸಂಪಾದನೆಗಳಿದ್ದರೂ ಅವು ಮುಖ್ಯವಾಗಿ ಎರಡು ಪರಂಪರೆಗೆ ಸೇರಿವೆ. ಶಿವಗಣಪ್ರಸಾದಿ ಮಹಾದೇವಯ್ಯ ಹಾಗೂ ಹಲಗೆದೇವರ ಶೂನ್ಯಸಂಪಾದನೆಗಳು ಹರಿಹರ ಕವಿಯ ಪರಂಪರೆಗೆ ಸೇರಿದರೆ, ಗುಮ್ಮಳಾಪುರ ಸಿದ್ಧಲಿಂಗದೇವರು ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆಗಳು ಚಾಮರಸ ಕವಿಯ ಪರಂಪರೆಗೆ ಸೇರುತ್ತವೆ. ಚಾಮರಸ ನೂರೊಂದು ವಿರಕ್ತರಲ್ಲಿ ಒಬ್ಬ. ಗುಮ್ಮಳಾಪುರ ಸಿದ್ಧಲಿಂಗದೇವರು ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರು ಕೂಡಾ ಇದೇ ಪರಂಪರೆಗೆ ಸೇರಿದವರು. ಗುಮ್ಮಳಾಪುರ ಸಿದ್ಧಲಿಂಗದೇವರು ಶರಣರ ಆಶಯಕ್ಕಿಂತ ವೀರಶೈವ ಧರ್ಮದ ಪುನರುತ್ಥಾನವಾಯಿತೆಂಬ ನಿಲುವಿನ ಪ್ರತಿಪಾದಕರು. ಪ್ರಭುದೇವರು ಶಾಪದಿಂದ ಬಂದುದು, ಕಾಮಲತೆಯ ಪ್ರಸಂಗವಿರುವುದು, ಅಕ್ಕ–ಕೌಶಿಕರ ಸಂಬಂಧವಿರುವುದು ಮೊದಲಿನ ಎರಡು ಸಂಪಾದನೆಗಳಲ್ಲಿ ಕಂಡುಬಂದರೆ, ನಂತರ ರಚನೆಯಾದ ಗುಮ್ಮಳಾಪುರದ ಸಂಪಾದನೆಯಲ್ಲಿ ಈ ಪ್ರಸಂಗಗಳು ಕಾಣುವುದಿಲ್ಲ. ಆದರೆ ಸಿದ್ಧರಾಮನ ದೀಕ್ಷಾ ಪ್ರಸಂಗ ಶಿವಗಣಪ್ರಸಾದಿ ಸಂಪಾದನೆಯಲ್ಲಿ ಇಲ್ಲದೇ ಇರುವುದರಿಂದಲೇ ಮುಂದಿನ ಸಂಪಾದನೆಗಳು ಹುಟ್ಟಿಕೊಂಡಿವೆ. ಸಿದ್ಧರಾಮನ ದೀಕ್ಷಾಕ್ರಮವನ್ನು ವಿಶೇಷವಾಗಿ ಬಣ್ಣಿಸಿವೆ. ಶಿವಗಣ ಪ್ರಸಾದಿ ಮಹದೇವಯ್ಯ ಮತ್ತು ಹಲಗೆಯಾರ್ಯರಲ್ಲಿ ಕಾಣಿಸದ ಆಯ್ದಕ್ಕಿಮಾರಯ್ಯಗಳ ಸಂಪಾದನೆ ಗುಮ್ಮಳಾಪುರದ ಸಿದ್ಧಲಿಂಗದೇವರ ಕೃತಿಯಲ್ಲಿದೆ. ಹೀಗೆ ಒಂದರಿಂದ ಮತ್ತೊಂದು ಸಂಪಾದನೆಯಲ್ಲಿ ಬೆಳವಣಿಗೆಯಿದೆ.

ಗುಮ್ಮಳಾಪುರದ ಸಿದ್ಧಲಿಂಗರು ತನ್ನ ಶೂನ್ಯಸಂಪಾದನೆಯ ಪ್ರಾರಂಭವನ್ನು ಶಿವಗಣಪ್ರಸಾದಿ ಮಹಾದೇವಯ್ಯನನ್ನು ಸ್ಮರಿಸುತ್ತಲೇ "ಶಿವಗಣಂಗಳ ಪ್ರಸಾದಿಮಹಾದೇವಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಆ ಮಹಾಪ್ರಸಂಗಮಂಸಮರ್ಪಿಸಿದ ಭೇದವೆಂತಿದ್ದುದೆಂದಡೆ" ಎಂದು ಹೇಳಿ ನಿಷ್ಠೆ'ಯನ್ನು ಪ್ರಕಟಪಡಿಸುವರು. ಅವನದೇ ಮಾತುಗಳಲ್ಲಿ ಅವನ ಕೃತಿಯ ವಿಶೇಷವನ್ನು ಹೇಳಿ, ಹಾಗೂ ಅದರ ಕರ್ತೃ ಶಿವಗಣಪ್ರಸಾದಿ ಮಹಾದೇವಯ್ಯನನ್ನು ಗೌರವಪೂರ್ವಕವಾಗಿ ಪಠಿಸಿ, ಹೇಳಿ, 'ಇಲ್ಲಿಯ ವಚನಕ್ರಮ ತಪ್ಪಿದಡೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದು' ಎನ್ನುವ ಅವನ ಹೇಳಿಕೆಯನ್ನೇ ಮುಂದಿಟ್ಟುಕೊಂಡು ಅವನ ಕೃತಿಯಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷಾಕ್ರಮವಿಲ್ಲದಿರಲು ಇದಕ್ಕೆ ಕೆಂಚವೀರಣ್ಣೊಡೆಯರು ದೇವರು ಪುರಾತನರ ವಚನವಿಡಿದು ಸಾವಿರದ ಏಳುನೂರು ವಚನಗಳಿಂದ ಸಿದ್ಧರಾಮೇಶ್ವರ ದೇವರಿಗೆ ದೀಕ್ಷಾಕ್ರಮದ ಭೇದವನು ಪ್ರತಿಷ್ಠಿಸಲು ಅದು ಶಿವಭಕ್ತಮಾಹೇಶ್ವರರಿಗೆ ವಿಶೇಷವಾಗಲು ಆ ಕ್ರಮವಿಡಿದು ಬೀಜದೊಳಗಣ ವೃಕ್ಷದ ಹಾಗೆ ತಾನು 'ಬಸವಾದಿಪ್ರಮಥರವಚನಗಳಿಂದ ಕರ್ಮಕಾಂಡ ಯೋಗಕಾಂಡ ಜ್ಞಾನಕಾಂಡಮಂ ಖಂಡಿಸಿ, ಈ ಮೂಲಕ್ಕೆ ಅತೀತವಾದ ಭಕ್ತಿಕಾಂಡವನೆ ತೆಗೆದು ಸಿದ್ಧರಾಮೇಶ್ವರದೇವರಿಗೆ ದೀಕ್ಷಾ ಕ್ರಮವನ್ನು ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಅತಿಸೂಕ್ಷ್ಮವಾಗಿ ಸೇರಿಸಿ' ತೋಂಟದಸಿದ್ದೇಶ್ವರದೇವರ ದಿವ್ಯಶ್ರೀ ಪಾದಕ್ಕೆ ಸಮರ್ಪಿಸಿದುದಾಗಿ ಹೇಳಿರುವನು. ಗುಮ್ಮಳಾಪುರದ ಸಿದ್ಧಲಿಂಗದೇವನಿಗೆ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯನ್ನು ಪರಿಷ್ಕರಿಸಲು ಪ್ರಮುಖ ಕಾರಣವಾಗಿ ಬಂದುದು ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷೆಯಿಲ್ಲದುದು. ಇದನ್ನು ತಾನು ತನ್ನ ಶೂನ್ಯ ಸಂಪಾದನೆಯಲ್ಲಿ ಪ್ರಧಾನವಾಗಿ ತಂದಿರುವುದಾಗಿ–ಹೇಳಿಕೊಂಡಿರುವರು. ಅದನ್ನು ಒಂದು ವೃತ್ತದಲ್ಲಿ ಕಾವ್ಯಮಯವಾಗಿ ಹೇಳಿಕೊಂಡಿದ್ದಾರೆ. ಓರ್ವ ಜಾಣನು ಸಿದ್ಧಪಡಿಸಿದ ನವಮೌಕ್ತಿಕಮಾಲೆಯನ್ನು ಹೋಲಿಕೆ ರೂಪದಲ್ಲಿ

ಕೊಡುತ್ತ ಆ ಮುತ್ತಿನ ಮಾಲೆಗೆ ಯೋಗ್ಯವಾದುದು ಅದರ ಮಧ್ಯಭಾಗದ 'ಸುರತ್ನ'ವೆಂದು ಹೇಳಿ, ಮಹಾದೇವಯ್ಯನು ಸಿದ್ಧಪಡಿಸಿದ ಶೂನ್ಯಸಂಪಾದನೆಯೆನ್ನುವ ಮುತ್ತಿನಸರಕ್ಕೆ ತಾನು ದೀಕ್ಷಾವಿಧಾನವೆನ್ನುವ ಸುರತ್ನವನ್ನು ಸೇರಿಸಿ ಅದು 'ಜನಪಡೆವಂತೆ' ಮಾಡಿದುದಾಗಿ ಸಿದ್ಧಲಿಂಗದೇವರು ತಿಳಿಸಿರುವರು. ಅದೇ ರೀತಿ ಕೃತಿಯ ಸಮಾಪ್ತಿ ಪದ್ಯವೊಂದರಲ್ಲಿ ಶೂನ್ಯಪೀಠದಲ್ಲಿ ಮಂಡಿಸಿದ್ಧ ಪ್ರಭುದೇವರ ಬಳಿಗೆ ಕಲ್ಯಾಣದ ಶರಣಸಮೂಹ ಶಿವತತ್ತ್ವ ರಹಸ್ಯವನ್ನು ತಿಳಿಸಬೇಕೆಂದು ಬಿನ್ನಹಮಾಡಲು, ಪ್ರಭುವು ಸಮ್ಮತಿಸಿ ವಿವರಿಸಿ ಹೇಳುವರು. ಅದನ್ನು (ದೀಕ್ಷೆಯ ಸತ್ಕರ್ಮಗಳನ್ನು) ಶಿವನನ್ನು ಪೂಜಿಸುವ ಭಕ್ತರಿಗೆ ತಿಳಿಯುವಂತೆ ಗುರೂತ್ತಮವಾದ ತೋಂಟದ ಸಿದ್ಧಲಿಂಗನು ಸಂತೋಷದಿಂದ ಹೇಳಿದನು. ಅವನ ಪಾದಗಳ ಬಳಿ ಕುಳಿತು ಚಿತ್ತವಿಟ್ಟು ಕೇಳಿದ ಗುಮ್ಮಳಾಪುರದಿಶನು ಮೀಟೆನಿಸುವ (=ಅತಿಶಯವಾದ) ರೀತಿಯಲ್ಲಿ ಆ ವಚನಾಮೃತದೂಟವನ್ನು ಶರಣಜನದ ಕಿವಿಗಳಿಗೆ ಉಣಬಡಿಸಿದನು ಎನ್ನುವ ಮಾತುಗಳೂ ಇದನ್ನೇ ಸೂಚಿಸುತ್ತದೆ.

ಶೂನ್ಯಸಂಪಾದನೆಗಳ ಪರಿಷ್ಕರಣಕ್ಕೆ ಈ ಸಿದ್ಧರಾಮನ ಲಿಂಗದೀಕ್ಷಾ ಪ್ರಕರಣವೇ ಮುಖ್ಯ ಕಾರಣವಾಗಿದೆ. ಈ ದೀಕ್ಷಾ ಪ್ರಸಂಗದ ಹಿಂದಿರುವ ಸತ್ಯಾಸತ್ಯತೆಗಳೇನೆಂಬುದನ್ನು ಕುರಿತು ಚಿಂತಿಸಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ಸಿದ್ಧರಾಮನ ಲಿಂಗದೀಕ್ಷೆಯ ಈ ಪ್ರಸಂಗವನ್ನು ಸಿದ್ಧಲಿಂಗದೇವರು ಔಚಿತ್ಯಪೂರ್ಣವಾಗಿ ಸಂಗ್ರಹಿಸಿದ್ದಾರೆ. ಮುಂದಿನ ಸಂಪಾದನಕಾರರು ತೋಂಟದ ಶಿವಯೋಗಿಗಳ ಪರಂಪರೆಯಲ್ಲಿ ಬೆಳೆದವರಾದ್ದರಿಂದ ಅವರು ಸಹಜವಾಗಿಯೇ ಇಷ್ಟಲಿಂಗ ಪರಂಪರೆಗೆ ಬದ್ಧರಾದ್ದರಿಂದ ಸಿದ್ಧರಾಮನ ಲಿಂಗದೀಕ್ಷಾ ಪ್ರಕರಣವನ್ನು ಸೇರಿಸಲೆಂದೇ ಶೂನ್ಯಸಂಪಾದನೆಗಳನ್ನು ಪರಿಷ್ಕರಿಸಬೇಕು ಎಂಬ ಹೇಳಿಕೆಯಲ್ಲಿ ಸತ್ಯಾಂಶವಿದೆ. "ಹೀಗೆ ಇಲ್ಲದ ಪ್ರಸಂಗಗಳನ್ನು ಸೃಷ್ಟಿಮಾಡುತ್ತಾ ಹೋದದ್ದರಿಂದಲೇ ಮುಂದಿನ ಶೂನ್ಯಸಂಪಾದನೆಗಳಲ್ಲಿ ಅನೇಕ ಖೊಟ್ಟಿ ವಚನಗಳು ಸೇರಿಕೊಂಡಿವೆ. ಇದನ್ನು ಡಾ. ಕಲಬುರ್ಗಿಯವರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಶೂನ್ಯಸಂಪಾದನಾಕಾರರೂ ಹೀಗೆ ಅನೇಕ ವಚನಗಳನ್ನು ತರ್ಕಬದ್ಧವಾಗಿ ಜೋಡಿಸಿದ್ದಾರೆ. ಆ ಸಂದರ್ಭದಲ್ಲಿ ನಿಂತು ನೋಡಿದಾಗ ಅವು ಖೊಟ್ಟಿವಚನಗಳೆಂದು ಅನ್ನಿಸುವುದೇ ಇಲ್ಲ. ಅಷ್ಟೊಂದು ಸಹಜತೆ ಈ ರಚನೆಗಳಲ್ಲಿದೆ.

ಗುಮ್ಮಳಾಪುರದ ಸಿದ್ಧಲಿಂಗರ ಶೂನ್ಯಸಂಪಾದನೆ ರಚನೆಯಾದ ಕಾಲಕ್ಕೆ ಆತನ ಕಣ್ಣೆದುರಿಗೆ ಶಿವಗಣಪ್ರಸಾದಿ ಮಹಾದೇವಯ್ಯಗಳ ಮೊದಲ ಶೂನ್ಯಸಂಪಾದನೆ ಮತ್ತು ಹಲಗೆಯಾರ್ಯನ ಪರಿಷ್ಕೃತ ಶೂನ್ಯಸಂಪಾದನೆಗಳಿದ್ದವು. ಹೀಗಾಗಿ ಈ ಎರಡೂ ಕೃತಿಗಳನ್ನು ಗಮನಿಸಿದ ಗುಮ್ಮಳಾಪುರದ ಸಿದ್ಧಲಿಂಗದೇವರು ಕೆಲವು ಪ್ರಸಂಗಗಳನ್ನು ಕೈಬಿಟ್ಟು, ಕೆಲವು ಪ್ರಸಂಗಗಳನ್ನು ಸೇರಿಸಿ, ಕೆಲವನ್ನು ಕಲ್ಪಿಸಿ ಶೂನ್ಯ ಸಂಪಾದನೆಯನ್ನು ಪರಿಷ್ಕರಿಸಿದ್ದಾರೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ನೋಡಬಹುದು.

ಶೂನ್ಯಸಂಪಾದನೆಯ ಕಥಾನಾಯಕನಾದ ಪ್ರಭುದೇವರ ಜೀವನದ ವಿಚಾರದಲ್ಲಿ ನಾಲ್ಕು ಜನ ಶೂನ್ಯ ಸಂಪಾದಕರಿಗೆ ಎರಡು ಅಭಿಪ್ರಾಯಗಳು ಇವೆ. ಒಂದು ಹರಿಹರನ ಕಥನ ರೀತಿ, ಎರಡು ಚಾಮರಸನಕಥನ ರೀತಿ, ಶಿವಗಣಪ್ರಸಾದಿ ಮತ್ತು ಹಲಗೆಯಾರ್ಯರು ಹರಿಹರನ ಅಭಿಪ್ರಾಯವನ್ನು ತೆಗೆದುಕೊಂಡರೆ; ಗುಮ್ಮಳಾಪುರ ಮತ್ತು ಗೂಳೂರು ಚಾಮರಸನ ದರ್ಶನ ದೀಪ್ತಿಯನ್ನು ಸ್ವೀಕರಿಸಿದ್ದಾರೆ. ಹೀಗಾಗಿ ವೇದ ತತಿಗೆ ಕೈ ನಿಲುಕದ ವ್ಯಕ್ತಿತ್ವವನ್ನು ಹೊಂದಿರುವ ಪ್ರಭುದೇವ ಮತ್ತು ಶರಣರಲ್ಲಿ ಜಗಹಿತಾರ್ಥದ ಉದ್ದೇಶವನ್ನು ಆರೋಪಿಸಿರುವುದು ಸರಿಯಾಗಿಯೇ ಇದೆ. ಆದರೆ ಎಲ್ಲ ಪ್ರಸಂಗಗಳಲ್ಲಿ ಕಥೆ ರೀತಿಯ ಈ ಮಾತನ್ನು ಹೇಳುವುದು ಕಷ್ಟ ಸಾಧ್ಯ. ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನು ಹೊಸದಾಗಿ ಸೇರಿಸಿರುವುದು. ಪ್ರಾಯಶಃ ಶರಣಸಿದ್ಧಾಂತಗಳಲ್ಲಿ ಪ್ರಮುಖವಾದುದು ಕಾಯಕ ಸಿದ್ಧಾಂತ, ಕಾಯಕವೇ ಕೈಲಾಸವಾದ ಕಾರಣ ಗುರು-ಲಿಂಗ-ಜಂಗಮವನ್ನು ಮರೆತು ಕಾಯಕ್ಕೆ ಪ್ರಥಮ ಆದ್ಯತೆ ನೀಡುವ ಸಲುವಾಗಿ ಈ ಪ್ರಸಂಗವನ್ನು ಜೋಡಿಸಲಾಗಿದೆ. ಅದೇರೀತಿ ಗೋರಕ್ಷಕನ ಪ್ರಸಂಗವನ್ನು ಹೊಸದಾಗಿ ಸೇರಿಸಲಾಗಿದೆ. ಇದರಿಂದ ವಜ್ರಕಾಯದ ಭ್ರಮೆಯನ್ನು ಬಿಡಿಸಿ, ಲಿಂಗಾಂಗ ಸಾಮರಸ್ಯದ ತತ್ವವನ್ನು ನಿರೂಪಿಸುವುದಕ್ಕಾಗಿ ಈ ಪ್ರಸಂಗವನ್ನು ಸೇರಿಸಿದ್ದಾನೆ.

ಅಕ್ಕಮಹಾದೇವಿಯ ಸಂಪಾದನೆಯಲ್ಲಿ ಕಿನ್ನರಯ್ಯನು ಅಕ್ಕನನ್ನು ಪರೀಕ್ಷಿಸುವ ಪ್ರಸಂಗವನ್ನು ತೆಗೆದುಹಾಕಿರುವುದು, ಕಾಮಲತೆಯ ಪ್ರಸಂಗವನ್ನು ಒಪ್ಪದಿರುವುದು ಈ ಭಾಗವನ್ನು ಗುಮ್ಮಳಾಪುರದ ಸಿದ್ಧಲಿಂಗರು ಕಾವ್ಯಾತ್ಮಕವಾಗಿ ನಿರೂಪಿಸಿರುವುದು ತಿಳಿದುಬರುತ್ತದೆ.

ಗುಮ್ಮಳಾಪುರದ ಸಿದ್ಧಲಿಂಗರ ಬಲವಾದ ನಂಬುಗೆಯಂತೆ ಗುರು–ಲಿಂಗ–ಜಂಗಮದ ಸ್ವರೂಪ ಬಸವಣ್ಣ–ಚೆನ್ನಬಸವಣ್ಣ–ಪ್ರಭುದೇವರು ಇವರು ಮರ್ತ್ಯಮಾನವರಲ್ಲ ದೇವಾಂಶಸಂಭೂತಮ್, ಲೋಕಾನುಗ್ರಹಕ್ಕಾಗಿ ಕೈಲಾಸದಿಂದ ಮರ್ತ್ಯಕ್ಕೆ ಅವತರಿಸಿ ಬಂದವರು, ಬಸವೇಶ್ವರನೆ ಜಗಹಿತಾರ್ಥವಾಗಿ ಗುರುಸ್ವರೂಪವಾಗಿ ಮರ್ತ್ಯಕ್ಕೆ ಅವತರಿಸಿದ; ಚನ್ನಬಸವೇಶ್ವರನೆ ಜಗತ್ಪಾವನವಾಗಿ ಲಿಂಗಸ್ವರೂಪಾಗಿ ಮರ್ತ್ಯಕ್ಕೆ ಅವತರಿಸಿದ; ಜಂಗಮವೆ ಪ್ರಭುದೇವರಾಗಿ ಸಕಲಭಕ್ತಗಣ ಹಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿದರು. ಈ ಮೂವರೂ 'ಕಾರಣಿಕರೆನ್ನುವುದೂ ಅವನ ಗಟ್ಟಿಯಾದ ತಿಳಿವಳಿಕೆ : ''ಆ ಭಕ್ತಿಯ ಬೆಳವಿಗೆಗೆ ಬಸವಣ್ಣ ಕಾರಣಿಕನಾದ; ಅರಿವಿನ ಬೆಳವಿಗೆಗೆ ಚೆನ್ನಬಸವಣ್ಣ ಕಾರಣಿಕನಾದ; ಈ ಎರಡನೊಳಕೊಂಬ ಮಹಾಘನಕ್ಕೆ ಪ್ರಭುದೇವರು ಕಾರಣಿಕನಾದ. '' ಈ ಗುರು–ಲಿಂಗ–ಜಂಗಮವು ಜಗಹಿತಾರ್ಥವಾಗಿ ಮೂರು ರೂಪದಲ್ಲಿ (ಬಸವಣ್ಣ– ಚೆನ್ನಬಸವಣ್ಣ– ಪ್ರಭುದೇವರು) ಮರ್ತ್ಯಲೋಕಕ್ಕೆ ಅವತರಿಸಿ ಬಂದಿದೆ. ಈ ಮೂವರು ಮರ್ತ್ಯಕ್ಕೆ ಅವತರಿಸಿ ಬಂದುದಕ್ಕೆ ಕಾರಣ ಕೈಲಾಸದಲ್ಲಿನ ಶಿವನ ಶಾಪದಿಂದಲ್ಲ. ಹಾಗೆ ಶಾಪದಿಂದ ಅವತರಿಸಿದರು ಎಂದು ಹರಿಹರ ತನ್ನ ರಗಳೆಗಳಲ್ಲಿ ಹೇಳಿರುವುದನ್ನು ಪರೋಕ್ಷವಾಗಿ ತೀಕ್ಷ್ಣವಾಗಿ ಖಂಡಿಸುತ್ತಾ, ಆವನಾನೊಬ್ಬನು ನುಡಿವುತ್ತಿದ್ದಾನು ಎಂದು ಹರಿಹರನ ಹೆಸರನ್ನೂ ಹೇಳಲುಇಷ್ಟಪಡದೆ ಪರೋಕ್ಷವಾಗಿ ಅವನು ಇಪ್ಪತ್ತೆಂಟು ಕೋಟಿ ನರಕದಲ್ಲಿ ರವಿಶಶಿಯುಳ್ಳನ್ನಬರ ನರಕವನನುಭವಿಸುತ್ತಿಪ್ಪನು' ಎಂದು ಹೇಳಿ, ತನ್ನ ಮಾತಿಗೆ ಸಾಕ್ಷಿಯಾಗಿ ಚೆನ್ನಬಸವಣ್ಣನ 'ಕೃತಯುಗದಲ್ಲಿ ಜಗದ್ವಿತಾರ್ಥವಾಗಿ.....' ಎಂದು ಪ್ರಾರಂಭವಾಗುವ ವಚನವನ್ನು ಗುಮ್ಮಳಾಪುರದ ಸಿದ್ಧಲಿಂಗರು ಉಲ್ಲೇಖಿಸುವರು. ಈ ಮೂವರೂ 'ಜಗಹಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ ಬಂದರೆನ್ನುವ ತನ್ನ ಅಚಲ ವಿಶ್ವಾಸವನ್ನು ಮೊದಲಿಗೆ ಪ್ರಕಟಪಡಿಸಿದವರು ಗುಮ್ಮಳಾಪುರದ ಸಿದ್ಧಲಿಂಗರೆ. ಇದು 13ನೇ ಶತಮಾನದ ಕವಿಗಳ ಕೃತಿಗಳ ನಾಯಕರ ಅವತಾರ ಕಲ್ಪನೆಗೆ ಪರ್ಯಾಯವಾದ 15ನೇ ಶತಮಾನದ ಧಾರ್ಮಿಕ ಶ್ರದ್ಧಾವಂತ ಮನಸ್ಸಿನ ತೀಕ್ಷ್ಣ ಪ್ರತಿಕ್ರಿಯೆಯ ರೀತಿಯಲ್ಲಿ ತೋರುತ್ತದೆ. ಗುಮ್ಮಳಾಪುರದ ಸಿದ್ಧಲಿಂಗರ ಮನದ ಸಿಟ್ಟು ಅಷ್ಟಕ್ಕೇ ನಿಲ್ಲುವುದಿಲ್ಲ. ಅವರು ತನಗಿಂತ ಹಿಂದಿದ್ದ ಕಲ್ಲುಮಠದಪ್ರಭುದೇವರು (1430) ಪ್ರಭುದೇವರ 'ಮಂತ್ರಗೋಪ್ಯ'ಕ್ಕೆ ಸೇರಿಸಿದ 'ಕಥಾಕೋವೆ'ಯನ್ನು ಸಾಕ್ಷಿಯಾಗಿ ಕೊಡುವರು.

ಮೊದಲಿಗೆ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಮಾಯಾವಿಲಾಸ ವಿಡಂಬನಸ್ಥಲ, ಸಂಸಾರಹೇಯಸ್ಥಲ, ಜೀವಭಾವಭ್ರಾಂತಿ ನಿರಸನಸ್ಥಲಗಳನ್ನು ಹೇಳಿಯಾದ ಮೇಲೆ ಅಲ್ಲಮಪ್ರಭುವು ಮಾಯಾವಿಲಾಸ ನಿವೃತ್ತಿಯನ್ನು ಮಾಡಿ ಅನಿಮಿಷದೇವರನ್ನು ಕಾಣುವರು. ಶಿವಗಣಪ್ರಸಾದಿ ಮಹಾದೇವಯ್ಯನಲ್ಲಿ ಮೊದಲಿಗೆ ಪ್ರಭುದೇವರ ಪೂರ್ವಸಾಂಗತ್ಯ ಬರುತ್ತದೆ. ಅಲ್ಲಿ ಅಲ್ಲಮಪ್ರಭು ಕಾಮಲತೆಯ ಪ್ರಸಂಗ ಬರುತ್ತದೆ. ಅಲ್ಲಮನನ್ನು ಮರ್ತ್ಯಮಾನವನನ್ನಾಗಿ ಚಿತ್ರಿಸುವ ಆ ಧೋರಣೆಯನ್ನು ಒಪ್ಪದ ಗುಮ್ಮಳಾಪುರದ ಸಿದ್ಧಲಿಂಗರು ಆ ಪ್ರಸಂಗವನ್ನು ಕೈಬಿಡುವರು. ಇದರಲ್ಲಿ ಸಿದ್ಧರಾಮನ ಪ್ರಸಂಗಕ್ಕೆ ಬಂದಾಗ ಪ್ರಾರಂಭದಲ್ಲಿ ಸಿದ್ಧರಾಮನನ್ನು ಭೇಟಿಯಾದದ್ದು, ಅವನ ಯೋಗಿತ್ವವು ಒರೆಗೆ ಹಚ್ಚಲ್ಪಟ್ಟದ್ದು, ಇಬ್ಬರಲ್ಲೂ ಸಮಾನವಾಗಿ ಬರುತ್ತವೆ. ಸ್ವಾರಸ್ಯದ ಸಂಗತಿಯೆಂದರೆ, ಪ್ರಭುದೇವರೂ ಸಿದ್ಧರಾಮಯ್ಯದೇವರೂ ಕಲ್ಯಾಣದ ಕಡೆ ಬರುತ್ತಾ ಬಸವರಾಜದೇವರ ಮಹಾತ್ಮೆಯನ್ನು ಕೊಂಡಾಡುತ್ತ ಪರಮಾನಂದದಲ್ಲಿ ಓಲಾಡುತ್ತಿದ್ದರು ಎಂದು ಹೇಳಿ, ಶಿವಗಣಪ್ರಸಾದಿಯು ಬಸವಣ್ಣನವರ ಪೂರ್ವವೃತ್ತಾಂತ ಪ್ರಸಂಗವನ್ನು ಸು. 27 ಸಾಲುಗಳ ಗದ್ಯದಲ್ಲಿ ನಿರೂಪಿಸುವನು. ಅಲ್ಲಮಪ್ರಭು–ಸಿದ್ಧರಾಮ ಕಲ್ಯಾಣಕ್ಕೆಬರುವ ಪೂರ್ವದಲ್ಲಿ ಪ್ರವೇಶಿಕಾ (introduction) ರೂಪದಲ್ಲಿ ಬಸವಣ್ಣ–ಚೆನ್ನಬಸವಣ್ಣನವರ ಮರ್ತ್ಯದ ಮಣಿಹದ ಪರಿಚಯ ಮಾಡಿಕೊಡುವರು. ಆದರೆ ಬಸವಣ್ಣನವರ ಸಂಪಾದನಾ ಪ್ರಸಂಗವು ಗುಮ್ಮಳಾಪುರದ ಸಿದ್ಧಲಿಂಗರಲ್ಲಿ ಏಳುಪುಟದಷ್ಟು ವಿಸ್ತಾರವಾಗಿ ಬಂದಿದೆ.

ಇಲ್ಲಿ ದ್ವಿತೀಯ ಶಂಭುವಾಗಿ ಬಸವಣ್ಣನು ಮರ್ತ್ಯಕ್ಕೆ ಅವತರಿಸಿದ ಕಥಾಕೋವೆಯನ್ನು ಪ್ರಸ್ತಾಪಿಸುತ್ತಾ ವರ್ಣನಾಪ್ರಿಯನಾದ ಅವನು ಕೈಲಾಸದ ವರ್ಣನೆ, ಶಿವನ ಸಭೆಗೆ ನಾರದನ ಆಗಮನ, ಭೂಲೋಕದಲ್ಲಿ ಭಕ್ತಿ ನಶಿಸಿ ಅದು ನರಕಾಂಬುಧಿಯಲ್ಲಿ ಮುಳುಗಿ ಹೋಗುತ್ತಿರುವ ಸ್ಥಿತಿಯ ನಿರೂಪಣೆ, ಶಿವನು ಭಕ್ತಿಯ ಉದ್ಧಾರಕ್ಕಾಗಿ ನಂದಿನಾಥನನ್ನು ಕಳುಹಿಸುವುದು. ಆ ಸಂದರ್ಭದಲ್ಲಿ ಪಾರ್ವತಿಯು ನಂದಿನಾಥನಿಗೂ ತನಗೂ ಭೇದವಿಲ್ಲವೆಂಬುದರ ಬಗೆಗೆ ಶಿವನಿಂದ ವಿವರಣೆ ಬಯಸಿದಾಗ, ಶಿವ ಅದನ್ನು ತಿಳಿಸುವುದು, ನಂದಿಯು ಮರ್ತ್ಯದ ಇಂಗುಳೇಶ್ವರ ಬಾಗೇವಾಡಿಯಲ್ಲಿ ಸಂತಾನವಿಲ್ಲದ ಮಂಡಗೆಯ ಮಾದಿರಾಜ ಮಾದಲಾಂಬಿಕೆಯರು ಮಾಡಿದ ನಂದಿನೋಂಪಿಯ ಫಲವಾಗಿ ಅವರಿಗೆ ಮಗನಾಗಿ ಜನಿಸುವುದು. ಶಿವನೆ ಗುರುವಾಗಿ ಬಂದು ಮಗುವಿಗೆ ಲಿಂಗಧಾರಣೆ ಮಾಡಿ ಬಸವನೆನ್ನುವ ಹೆಸರಿಟ್ಟು ಹೋಗುವುದು-ಇತ್ಯಾದಿ ವಿವರಗಳನ್ನು ಪ್ರಸ್ತಾಪಿಸಿದ್ದು, ಈ ವಿಷಯದಲ್ಲಿ ಗುಮ್ಮಳಾಪುರದ ಸಿದ್ಧಲಿಂಗರು ಭೀಮಕವಿಯ ಬಸವಪುರಾಣವನ್ನು ಅನುಸರಿಸಿದ್ದಾರೆ ಎಂದೆನಿಸುತ್ತದೆ.

ಬಸವಣ್ಣನು ಶಾಪಗ್ರಸ್ತನಾಗಿ ಮರ್ತ್ಯದಲ್ಲಿ ಜನಿಸಿದವನೆಂಬುದನ್ನು ಬಲವಾಗಿ ಅಲ್ಲಗಳೆಯುವ ರೀತಿಯಲ್ಲಿ (ಹಾಗೆ ನಿರೂಪಿಸುವವರಿಗೆ) ಹರಗುರುದ್ರೋಹ ತಪ್ಪದು, ಅವನು ಆ ದ್ರೋಹದಿಂದ ಧರೆ ಚಂದ್ರಾರ್ಕತಾರಾಂಬರವಿರುವವರೆವಿಗೂ ಇಪ್ಪತ್ತೆಂಟು ಕೋಟಿನರಕದಲ್ಲಿ ಸುಖದಿಂದಿರುವರು ಎಂದು ಹೇಳುವನು. ಬಸವಣ್ಣನ ಕಥೆ ಶಿವಗಣಪ್ರಸಾದಿಯಲ್ಲಿ ಬಂದಿರುವುದಕ್ಕೂ, ಗುಮ್ಮಳಾಪುರದ ಸಿದ್ಧಲಿಂಗನಲ್ಲಿನದಕ್ಕೂ ಗಮನಾರ್ಹ ವ್ಯತ್ಯಾಸಗಳಿವೆ. ಗುಮ್ಮಳಾಪುರದ ಸಿದ್ಧಲಿಂಗರ ನಂಬುಗೆಯಂತೆ ಬಸವಣ್ಣ ಎರಡನೆಯ ಶಂಭು, ಮಂಗಳಾತ್ಮಕ ಬಾಲಲೀಲೆಯನ್ನು ನಟಿಸಿ ಸುಖದಿಂದಿದ್ದು ಒಂದು ದಿನ ಗೃಹತ್ಯಜಿಸಿ ಹೋಗುವೆನೆಂದುಹೇಳಿದಾಗ (ಗೃಹತ್ಯಾಗಕ್ಕೆ ಗುಮ್ಮಳಾಪುರದ ಸಿದ್ಧಲಿಂಗನು ನಿರ್ದಿಷ್ಟ ಕಾರಣಕೊಡುವುದಿಲ್ಲ ) ತಂದೆ-ತಾಯಿಯರು ದೇವಾ, ನೀನಗಲಿದಡೆ ನಾವು ಬಾಳಪರಿಯೆಂತು? ಅ ಅಲುಗೊಂಡವಂಗೆ ಅಮೃತದ ತೊಯ ಕೈಸಾರಿ ಬಯಲಾದಂತೆ ಎಮಗಾದುದು ಎಂದು ಕಣ್ಣೀರ್ಗರೆಯುತ್ತ ಮಗನ ಪಾದಗಳ ಮೇಲೆ ಬಿದ್ದು ಹೊರಳಾಡುವರು. ಬಸವಣ್ಣನು ಅವರ ತಲೆ ಹಿಡಿದೆತ್ತಿ ನೀವು ನನ್ನನ್ನು ಸದಾ ನೆನೆಯುತ್ತಿರಲು ನಿಮ್ಮ ಹೃದಯದಲ್ಲಿ ನಾನು ನೆಲೆಸುವೆನು ಎಂದು ಸಮಾಧಾನಿಸುವನು.

ಅನಂತರ ಅಕ್ಕನಾಗಮ್ಮಳ ಜೊತೆ ಮನೆ ಬಿಡುವನು. (ಶಿವಗಣಪ್ರಸಾದಿಯು ನಾಗಮ್ಮಳನ್ನು 'ತಂಗಿ' ಎಂದರೆ, ಗುಮ್ಮಳಾಪುರದ ಸಿದ್ಧಲಿಂಗನು 'ಅಕ್ಕ' ಎನ್ನುವನು.) ಬಿಜ್ಜಳನ ಆಸ್ಥಾನದಲ್ಲಿ ಓಲೆಯೊಂದು ಬೀಳಲು ಕರಣಿಕರನ್ನು ಕರೆಯಿಸಿ ಅದನ್ನು ಓದಿಎಂದು ಅರಸ ಹೇಳುವನು. ಅದು ಕರಣಿಕರೆಲ್ಲರಿಗೆ ಓದಲಾಗದಿರಲು ನಮ್ಮಿಂದ ಸಾಧ್ಯವಿಲ್ಲವೆನ್ನುವರು. ಬಲದೇವಮಂತ್ರಿಯು ತನ್ನ ಹೃದಯದಲ್ಲಿ ಬಸವಣ್ಣ ಕಾಣಿಸಿಕೊಳ್ಳಲು, ಈ ಲೋಕವನ್ನು ಹೆತ್ತ ತಂದೆ ಬಸವಣ್ಣ ಬರುತ್ತಿರುವನು ಈ ಲಿಪಿಯನ್ನು ಅವನ ಕೈಯಿಂದ ಓದಲು ಮಾತ್ರ ಸಾಧ್ಯವೆನ್ನುವನು. ಬಿಜ್ಜಳನು ಕುತೂಹಲದಿಂದ ಆ ಮಹಾತ್ಮನೆಲ್ಲಿರುವನು ಎಂದು ಕೇಳಲು, ಅದಕ್ಕೆ ಬಲದೇವನು ಇಂಗುಳೇಶ್ವರದಿಂದ ಅವನು ಬರುತ್ತಿರುವನು ಎನ್ನುವನು. ಬಸವಣ್ಣನು ಕಲ್ಯಾಣಕ್ಕೆ ಬರಲು ಅವನನ್ನು ವೈಭವದಿಂದ ಇದಿರುಗೊಂಡು ಬಿಜ್ಜಳನು ಈ ಹರನಿರೂಪವನ್ನು ಓದಿಹೇಳಿ ಎಂದು ಪ್ರಾರ್ಥಿಸುವನು. ಬಸವಣ್ಣನು ಆ ಲಿಪಿಯನ್ನು ಓದಿ 66 ಕೋಟಿದ್ರವ್ಯವನ್ನು ಹೊರತೆಗೆಸಲು ಬಿಜ್ಜಳನು ಮೆಚ್ಚಿ ಎಪ್ಪತ್ತೆರಡು ನಿಯೋಗಗಳನ್ನು ಮುಂದಿಟ್ಟು ಸಾಷ್ಟಾಂಗ ನಮಸ್ಕಾರವನ್ನು ಮಾಡುವನು. ಬಸವಣ್ಣನು ಬಿಜ್ಜಳನಿಗೆ ಅಭಯವಿತ್ತು ಸಕಲ ಸಾಮಾಜ್ಯಕ್ಕೆ ಕರ್ತನಾಗಿ ಸುಖದಿಂದಿರುವನು, ಬಲದೇವನು ತನ್ನ ಮಗಳು ಗಂಗಾಂಬಿಕೆಯನ್ನು ವಿವಾಹಮಾಡಿಕೊಡುವನು. ಬಸವಣ್ಣನು ನಿತ್ಯವೂ ಎಂಬತ್ತೆಂಟು ಪವಾಡಗಳನ್ನೂ, ವಾದಿಗಳಿಗೆ ಹಲವು ದೃಷ್ಟ (=ಪವಾಡ)ಗಳನ್ನೂ ತೋರುವನು. ಅಕ್ಕ ನಾಗಾಯಿಯ ಬಸಿರಿನಲ್ಲಿ ಚೆನ್ನಬಸವಣ್ಣ ಜನಿಸುವನು, ಎಲ್ಲ ಪ್ರಮಥರಿಗೆ ಷಟ್ಸ್ಥಲವನ್ನು ಬೋಧಿಸುವನು. ಚೆನ್ನಸಂಗಮನೆಂಬ ಲಿಂಗವ ಪ್ರಾಣವಾಗಿ ಬಸವಣ್ಣನ ಸ್ತೋತ್ರಮಾಡುವನು. ಬಸವಣ್ಣನವರ ಹುಟ್ಟಿನಿಂದ ಪ್ರಾರಂಭಿಸಿ ಬಲದೇವನ ಮಗಳು ಗಂಗಾಂಬಿಕೆಯ ಕೈಹಿಡಿಯುವವರೆಗಿನ ಕಥೆಯನ್ನು ಭೀಮಕವಿಯ ಬಸವ ಪುರಾಣದಿಂದ

ಸ್ವೀಕರಿಸಿದ್ದರೆ, ಚೆನ್ನಬಸವಣ್ಣನ ಜನನ, ಪ್ರಭುವಿನ ಆಗಮನ ನಿರೀಕ್ಷೆ ಇತ್ಯಾದಿ ವಿವರಗಳನ್ನು ಶಿವಗಣಪ್ರಸಾದಿಯ ಶೂನ್ಯಸಂಪಾದನೆಯಿಂದ ತೆಗೆದು ಕೊಂಡಿದ್ದಾನೆ.

ಗುಮ್ಮಳಾಪುರದ ಸಿದ್ಧಲಿಂಗನಿಗೆ ಸಿದ್ಧರಾಮನ ಲಿಂಗದೀಕ್ಷೆಯ ಪ್ರಸಂಗ ಬಹಳ ಮುಖ್ಯವೆನ್ನಿಸಿದ್ಧರಿಂದ, ಕಲ್ಯಾಣಕ್ಕೆ ಅಲ್ಲಮಪ್ರಭು ಸಿದ್ಧರಾಮನನ್ನು ಕರೆದುಕೊಂಡು ಬಂದು ಮಹಾಮನೆಯ ಶರಣರಿಗೆ ಅವನನ್ನು ಪರಿಚಯಿಸುವ ಸಂದರ್ಭದಲ್ಲೇ ಅದನ್ನು ತಂದುಬಿಡುವನು. ಕವಿಹೃದಯದ ಗುಮ್ಮಳಾಪುರದ ಸಿದ್ಧಲಿಂಗನಲ್ಲಿ, ಪ್ರಭುದೇವರ ಮಹಾನ್ ವ್ಯಕ್ತಿತ್ವದಿಂದ ಪ್ರಭಾವಿತನಾದ ಬಸವಣ್ಣ ಭಾವಪರವಶನಾಗಿ ನಾನಾಮುಖದಿಂದ ಸ್ತೋತ್ರ ಮಾಡುತ್ತಿದ್ದಾಗ, ಅದನ್ನು ತಡೆಯುವ ಪ್ರಭು ಇನ್ನು ಸ್ತೋತ್ರ ಸಾಕು ಎಂದು ಹೇಳಿ ಬಸವಣ್ಣನ ರಾಜಭವನದತ್ತ ನಡೆಯುತ್ತಿರಲು, ಅಲ್ಲಿ ಪ್ರಮಥರ ತಿಂಥಿಣಿಯಿಂದ, ಅನುಭಾವದ ಸದ್ಯೋಷ್ಟಿಯಿಂದ ಉಘ್ ಚಾಂಗು ಭಲಾ ಎನ್ನುವ ಶಬ್ದಸಡಗರ ಕೇಳಿಬರುತ್ತದೆ. ಆ ಸಂಭ್ರಮದಲ್ಲಿ ನಡೆಯುವಾಗ ಬಸವಣ್ಣನ ಮಹಾಮನೆಯ ಮುಂದಣ ಪ್ರಸಾದದ ಕುಳಿಯ ಸಮೀಪಕ್ಕೆ ಶರಣ ಸಮೂಹ ಬರುತ್ತಿರಲು, ಅಲ್ಲಿದ್ದ ಮರುಳಶಂಕರದೇವನೆನ್ನುವ ಗುಪ್ತಭಕ್ತನು ಆ ಶರಣ ಸಮೂಹವನ್ನೂ ಪ್ರಭುದೇವರ ಶ್ರೀಮೂರ್ತಿಯನ್ನೂಡಿ, ಮೆಲ್ಲನೆ ಆ ಪ್ರಸಾದಕುಂಡದಿಂದ ಹೊರಬರುತ್ತಿರುವ ನುಡಿಬೆಡಗಿನ ಅನುಪಮ ವ್ಯಕ್ತಿಚಿತ್ರವನ್ನು ಗುಮ್ಮಳಾಪುರದ ಸಿದ್ಧಲಿಂಗರು ಈ ಕೆಳಕಂಡಂತೆ ಕೊಡ ಮಾಡಿದ್ದಾರೆ.

“ವಸಂತಮಾರುತಂ ಬರಲು ಭೂತದಿಂದಂಕುರ ಪೊರಮಡುವಂತೆ, ಸ್ವಾತಿಯ ವರುಷದ ದಿನಕ್ಕೆ ಅಂಬುಧಿಯೊಳಗಿರ್ದು ಕಾಣಬಪ್ಪಂತೆ, ನಲಿದು ಸೂಜಿಕಲ್ಪಕಾಣುತ್ತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ, ಶಿವಯೋಗಾಂಗದಲ್ಲಿ ತನುವಮಣಿದಿರ್ದ ಶಿವಯೋಗಿ ತನಗೆ ಶಿವಪ್ರಸನ್ನಮಾಗಲು ಮುಂದೆ ಶಿವನಶ್ರೀಚರಣಕಮಲಮಂ ಕಂಗಳಿಂದೊತ್ತಿಕೊಂಬೆನೆಂಬ ತೆನಂತೆ, ಪೌರ್ಣಿಮೆಯ ಚಂದ್ರನುದಯಕ್ಕೆ ಸಿಂಧು ಮೆಲ್ಲನೆ ಮುಂದಕ್ಕುಬ್ಬಿ ನಡೆದು ಬಪ್ಪಂತೆ ಮರುಳಶಂಕರದೇವರು ಪ್ರಸಾದದ ಕೊಂಡದಿಂ ಪೊಱಮಡುತಿರ್ದ ಪ್ರಸ್ತಾವದೊಳು ಅಲ್ಲಿ ಅಲ್ಲಮಪ್ರಭುದೇವರಿಗೆ ಅವರ ನಿಲವು ತೋರಿತ್ತು.....

ಗುಮ್ಮಳಾಪುರದ ಸಿದ್ಧಲಿಂಗರದು ಸನ್ನಿವೇಶ ನಿರ್ಮಾಣ ಪ್ರತಿಭೆ, ಅಲ್ಲಮಪ್ರಭುವು ಮರುಳಶಂಕರನೆನ್ನುವ ಮಹಾನ್ ಶರಣನನ್ನು ದರ್ಶಿಸುವ ಪೂರ್ವದಲ್ಲಿ ಒಂದು ಅಪರೂಪದ ವಿಶಿಷ್ಟ ಸನ್ನಿವೇಶವನ್ನು ನಿರ್ಮಾಣಮಾಡುವನು. ಎರಡು ಅದ್ಭುತ ಚೇತನಗಳು ಮುಖಾಮುಖಿಯಾಗುವ ಪ್ರಸಂಗದ 'ಕನಸು' ಗುಮ್ಮಳಾಪುರದ ಸಿದ್ಧಲಿಂಗನದು. ಅಲ್ಲಮನ ದಿವ್ಯಮೂರ್ತಿಯನ್ನು ಕಣ್ಣುಂಬಿ ಕಾಣುವ ತನಕ ಮರುಳಶಂಕರದೇವನದು. ಅದು ಮೇಲಿನ ಮೂರು ಸಾದೃಶ್ಯಗಳಲ್ಲಿ ಮನೋಜ್ಞವಾಗಿ ಅಭಿವ್ಯಕ್ತಿ ಪಡೆದುಕೊಂಡಿದೆ. ಬರುತ್ತಿರುವವನು ಶಿವನ ಪ್ರತಿರೂಪವಾದ ಅಲ್ಲಮಪ್ರಭು. ಅವನ ಪಾದಗಳನ್ನು ಕಣ್ಣಿಗೆ ಒತ್ತಿಕೊಳ್ಳುವ ಹಂಬಲದಿಂದ, ಹುಣ್ಣಿಮೆಯಂದು ಚಂದ್ರೋದಯವಾದ ಸಂದರ್ಭದಲ್ಲಿ ಸಿಂಧು ಮೆಲ್ಲನೆ ಮುಂದಕ್ಕೆ ಉಬ್ಬಿ ಚಲಿಸುವಂತೆ, ಮರುಳಶಂಕರದೇವ ಅಲ್ಲಮನನ್ನು ಮೆಲ್ಲ ಮೆಲ್ಲನೆ ಸಮೀಪಿಸಿದನೆಂದು ಕೊಡುವ ಹೋಲಿಕೆ ಅಪೂರ್ವವೆನ್ನಿಸುತ್ತದೆ. ಇದಿಷ್ಟು ಮರುಳಶಂಕರದೇವನ ಕುತೂಹಲಾವಿಷ್ಟ ಭಕ್ತಿಕೈಂಕರ್ಯ. ಇನ್ನು ಅಲ್ಲಮಪ್ರಭುವಾದರೊ ಮರುಳಶಂಕರನಂತಹ ಭವ್ಯಜೀವಿಯನ್ನು ನೋಡಿದಾಗಿನ ಭಕ್ತಿಪೂರ್ಣವಾದ ಆ ಬೆರಗು ಅವನ ಮಾತಿನಲ್ಲಿ ಮೈವೆತ್ತಿ ನಿಲ್ಲುತ್ತದೆ

**ಗುಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋರಿತ್ತು,**
**ಕಾಣಾ ಸಂಗನಬಸವಣ್ಣಾ! (ವ. ಸಂ. 648)**

ನಾನೊಂದು ಅತಿಶಯವನ್ನು ಕಂಡೆ ಎಂದು ಹೇಳುವ ಮೂಲಕ ಅಲ್ಲಮಪ್ರಭು ನೆರೆದವರ ಕುತೂಹಲ ಮೀಟುವ ಶಿವಗಣಪ್ರಸಾದಿಯ ನಿರೂಪಣೆಗೂ ಒಂದುಸೊಗಸಾದ ಹಿನ್ನೆಲೆ ಕೊಟ್ಟು ಎರಡು ದಿವ್ಯ ಪ್ರಭಾಪುಂಜಗಳು ಪರಸ್ಪರ ಸೇರುವಾಗಿನ ಅಪೂರ್ವ ಯೋಗಾಯೋಗದ ಪರಿಣಾಮಕಾರಿ ದೃಶ್ಯ ವೈಭವ ಮನೋಹರವಾದುದು. ಇಲ್ಲಿ ಗುಮ್ಮಳಾಪುರದ ಸಿದ್ಧಲಿಂಗರ ಕಲ್ಪನೆ

ಭವ್ಯವಾದು. ಏಕೆಂದರೆ ಅದು ಕವಿಯ ಕಾಣ್ಕೆ, ದರ್ಶನ. ಸಿದ್ಧಲಿಂಗನದು ದರ್ಶನ ಪ್ರತಿಭೆ. ಗುಮ್ಮಳಾಪುರದ ಸಿದ್ಧಲಿಂಗರ ಕವಿಮನಸ್ಸು ಬಸವರಾಜನು ಕುತೂಹಲಾವಿಷ್ಟನಾಗಿ ಆ ಆಶ್ಚರ್ಯವಾವುದು ಎಂದು ಕೇಳುವಾಗಿನ ಸಂದರ್ಭದಲ್ಲಿ ಒಂದು ಸುಂದರ ಹಾಗೂ ಅರ್ಥಪೂರ್ಣ ವಚನವನ್ನು ಅಳವಡಿಸುವನು :

**ದೇವರ ದೇವ ಮಲಯಜದಿಂದಂ ಮೇಲೆ ಮಲಯಜ ಉಂಟೆ?**
**ಪರುಷದಿಂದಂ ಮೇಲೆ ಪರುಷವಾವುದುಂಟೆ ಅಯ್ಯಾ?**
**ಅಮೃತಾಹಾರದಿಂದಂ ಮೇಲೆ ಭೋಜನವಾವುದುಂಟೆ ಅಯ್ಯಾ?**
**ನಿಮ್ಮಿಂದೊಂದಾಶ್ಚರ್ಯವ ಕಂಡೆನೆಂಬುದ ಎನಗೆ ನಿರೂಪಿಸಾ**
**ಕೂಡಲಸಂಗಮದೇವ ಪ್ರಭುವೆ. (ವ. ಸಂ. 649)**

ಈ ವಚನ ಶಿವಗಣಪ್ರಸಾದಿಯಲ್ಲಿ ಇಲ್ಲದಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಇದು ಗುಮ್ಮಳಾಪುರದ ಸಿದ್ಧಲಿಂಗರ ಸ್ವಂತಿಕೆಯ ವಚನಗಳು. ಆ ಆಶ್ಚರ್ಯವನ್ನು ವಚನಾನುಭಾವಮುಖದಿಂದ ಬಸವಣ್ಣನಿಗೆ ಅಲ್ಲಮಪ್ರಭು ಒಳಗೊಂಡು ಸಾಂದರ್ಭಿಕವಾಗಿ ಸೃಷ್ಟಿಸಿದ ವಚನಗಳ ಕಾವ್ಯಮಯತೆ ಓದುಗನನ್ನು ಆಕರ್ಷಿಸುತ್ತದೆ. ಅವುಗಳ ಸಾರ ಇಂತಿದೆ.

ನೀರು ಕ್ಷೀರ ಬೆರತಂತೆ ಬೆಳುಗಾರ (=ಅಕ್ಕಸಾಲಿ)ಚಿನ್ನದ ಜೊತೆ ತಾಮ್ರವನ್ನು ಬೆರಸಿದಾಗ ಆ ಸಂದು ಕಾಣದಂತೆ ಉರಿಯುಂಡಕರ್ಪುರದಂತೆ ಲಿಂಗದೊಡನೆ ಬೆರಸಿ ಬೇರಿಲ್ಲದಂತಿರುವ ಮರುಳಶಂಕರದೇವ.

ಶಬ್ದಮುಗ್ಧ ಸ್ಥಿತಿಯನ್ನು ಮಾತಿನಿಂದ ಹೇಳಲು ಸಾಧ್ಯವೆ? ಕಣ್ಣಮುಂದಿನ ಆ ಆಶ್ಚರ್ಯವನ್ನು ಕಂಡು ನಾನು ಬದುಕಿದೆ ಎಂದು ಅಲ್ಲಮನೇ ಹೇಳುವಾಗ, ಲೋಕದಕಣ್ಣಿಗೆ ಮರುಳನಂತಿರುವ ಆ ಶರಣನ ಮಹಿಮಾತಿಶಯವನ್ನು ಮೇಲಿನ ಮೂರೂ ಸಾದೃಶ್ಯಗಳು ಸಾಂದರ್ಭಿಕವಾಗಿ ಒಂದು ಭವ್ಯ ಚಿತ್ರವನ್ನು ಕಣ್ಣಮುಂದೆ ನಿಲ್ಲಿಸುತ್ತವೆ. ಮರುಳಶಂಕರದೇವನು ಕೊಂಡದಿಂದ ನಲಿನಲಿದು ಬಂದು ಪ್ರಭುದೇವರಿಗೆ

**ನಮಸ್ಕಾರ ಮಾಡಿ**
**ಗರ್ಭದೊಳಗಣ ಶಿಶು ನವಮಾಸವ ಹಾರಿಕೊಂಡಿರ್ದಂತೆ ಇದ್ದೆನಯ್ಯಾ,**
**ಎನ್ನ ಜನ್ಮ ಸಫಲವಾಯಿತ್ತಯ್ಯಾ, (ಅದೇ, ವ. ಸಂ. 654)**

ಅಲ್ಲಮಪ್ರಭುವನ್ನೂ ಸಕಲ ಪುರಾತನರನ್ನೂ ಸ್ತುತಿಸುವ ಈ ವಚನದ ಎರಡನೆಯಸಾಲು ಪ್ರಭುದೇವರ ನಿರೀಕ್ಷೆ ಹಾಗೂ ಕಂಡ ಮೇಲಿನ ಧನ್ಯತೆ ಈ ಎರಡನ್ನೂ ಚೆನ್ನಾಗಿ ಹೇಳುತ್ತಿದೆ.

ಗುಮ್ಮಳಾಪುರದ ಸಿದ್ಧಲಿಂಗರ ಶೂನ್ಯಸಂಪಾದನೆಯಲ್ಲಿ ಆಯ್ದಕ್ಕಿ ಮಾರಯ್ಯಗಳ ಸಂಪಾದನೆಯ ಪ್ರಸಂಗ ಕಾಯಕತತ್ವವನ್ನು ಹೊಸದಾಗಿ ಲಕ್ಕಮ್ಮಗಳು ಪ್ರತಿಪಾದಿಸಲು ಸೇರ್ಪಡೆಯಾಗಿದೆ. ಮಹಾಮನೆಯಲ್ಲಿ ಶರಣರು ಸುಖಾನುಭಾವ ಗೋಷ್ಠಿಯಲ್ಲಿರುವಾಗ ಆಯ್ದಕ್ಕಿ ಮಾರಿತಂದೆಗಳು ಪ್ರಭುದೇವರೊಡನೆ ನಿರ್ವಂಚನೆಯಿಲ್ಲದ ಗುರು ಲಿಂಗಜಂಗಮ ಕಾಯಕವೆ ಕೈಲಾಸವೆಂದು ಬಿನ್ನಹ ಮಾಡುವನು. ಹಾಗೆಯೇ ಅವನು 12ನೇಶತಮಾನದ ಶಿವಶರಣರ ಆಲೋಚನೆಗೆ ಪೂರಕವಾಗಿ ಕಾಯಕತತ್ವದ ಬಗೆಗೆ ತನ್ನದೇ ತನ್ನದೇ ಆದ ವಿಚಾರಧಾರೆಗಳನ್ನು ಹೊಂದಿದ್ದನು.

ಅವನ ಪ್ರಕಾರ, ಕಾಯಕದಲ್ಲಿ ತೊಡಗಿದ ವ್ಯಕ್ತಿಯು ಕಾಯಕದಲ್ಲಿ ಎಷ್ಟರಮಟ್ಟಿಗೆತಲ್ಲೀನನಾಗಿ ರಬೇಕೆಂದರೆ, ಗುರುದರ್ಶನವಾದರೂ, ಲಿಂಗಪೂಜೆಯಾದರೂ, ಜಂಗಮ ಮುಂದಿದ್ದರೂ 'ಕಾಯಕವೇ ಕೈಲಾಸ'ವಾಗಿರುವ ಕಾರಣ ಮರೆಯಬೇಕು. ಗುರು-ಲಿಂಗ-ಜಂಗಮಗಳ ಜೊತೆಗೂಡಿ ದಾಸೋಹ ಮಾಡುವಲ್ಲಿ ಹೊನ್ನು ಹೆಣ್ಣು-ಮಣ್ಣು ಈ ಮೂರರ ಮೇಲಣ ಮಮಕಾರ ಹಿಂಗಿರಬೇಕು. ಮನಸ್ಸು ನಿರ್ಮಲವಾಗಿದ್ದಲ್ಲಿ ಲಿಂಗವನ್ನು ತಿಳಿಯಲು ಈ ಮೂರನ್ನೂ ಮರೆಯಬೇಕು. ಮಾರಯ್ಯನು ತನ್ನ ಕಾಯಕ ನಿರತ(=ಸತ್ಯ )ವನ್ನು ಅಲ್ಲಮಪ್ರಭುವಿನ ಜೊತೆ ಹೇಳಿಕೊಂಡಾಗ, ಅಲ್ಲಮಪ್ರಭುವು ಅದಕ್ಕೆ

ಪ್ರತಿಕ್ರಿಯಿಸುತ್ತ ಕಣ್ಣುಗಳ ಮುಂದಿರುವ ಆಸೆಯನ್ನು ನಿವಾರಿಸಿ, ಬಯಕೆಯ ಮುಂದಿರುವ ಮನಸ್ಸನ್ನು ಕಟ್ಟಿಹಾಕಿ, ಮಾಡಿಹನೆನ್ನುವ ಮಾಟಕೂಟದ ಚಿತ್ರ ಮನಸ್ಸಿನ ಲಹರಿಯನ್ನು ನಿಲ್ಲಿಸಬೇಕು. ಹಾಗಲ್ಲದೆ ಗುಹೇಶ್ವರಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ, ಇತ್ಯಾದಿ ಸಂಭಾಷಣೆ ನಡೆಸುವ ಸಂದರ್ಭದಲ್ಲಿ, ಈ ಸಂಭಾಷಣೆಗೆ ಬೇರೊಂದು ಆಯಾಮ ಕಲ್ಪಿಸುವ ಸಲುವಾಗಿ ಮಾರಯ್ಯನ ಪತ್ನಿ ಲಕ್ಕಮ್ಮಳ ಪ್ರವೇಶವಾಗುವುದು. ಗಂಡ ಆಧ್ಯಾತ್ಮದ ಹಂಬಲದಲ್ಲಿ ಕಾಯಕವನ್ನು ಮರೆತು ಕುಳಿತಾಗ ಅವನನ್ನು 'ಕಾಯಕನಿಂತಿದೆ, ಭಾವಶುದ್ಧವಾಗಿ ಪ್ರಮಥರ ಮನೆಯ ಅಂಗಳಕ್ಕೆ ಹೋಗಿ ಅಕ್ಕಿಯನ್ನು ಆಯ್ದು ತರಲು ಗಂಡನನ್ನು ಎಚ್ಚರಿಸುವಳು.

ಕಾಯಕ ನಿತ್ಯಜೀವನದ ಅಗತ್ಯಭಾಗವಾಗಿ ಪರಿಗಣಿಸಿದ'ವಿಚಾರಪತ್ನಿ' ಲಕ್ಕಮ್ಮ ಇನ್ನೊಂದು ಹೆಜ್ಜೆ ಮುಂದಿಟ್ಟು ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನು ಆಯ್ದು ತಂದ ತನ್ನ ಗಂಡನ ದುರಾಸೆಗೆ ಕಡಿವಾಣ ಹಾಕಿ, ನಿತ್ಯದಂತೆ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟನ್ನೇ ತರಲು ಸೂಚಿಸಿ ಹೆಚ್ಚಿನದನ್ನು ಬಸವಣ್ಣನ ಮನೆಯ ಅಂಗಳದಲ್ಲಿ ಸುರಿದುಬರುವಂತೆ ಸೂಚಿಸುವಳು. ಹೆಚ್ಚಿನ ಆಸೆಬುರುಕತನವಿಲ್ಲದೆ ಸಂತೃಪ್ತಿಯ ಬದುಕನ್ನು ನಡೆಸಲೂ ಸಾಧ್ಯವಿದೆ ಎಂಬುದರ ಸಂಕೇತವಾಗಿ'ಮಾರಯ್ಯಪ್ರಿಯ ಅಮಲೇಶ್ವರಲಿಂಗ ಕೊಟ್ಟ ಕಾಯಕವೆ ಸಾಕು' ಎನ್ನುವ ಆದರ್ಶವನ್ನು, ಅವಳು ತನ್ನ ಗಂಡನ ಮುಂದಿಡುವಳು. ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ? 'ಈಸಕ್ಕಿಯಾಸೆ ನಿಮಗೇಕಯ್ಯಾ, ಈಶ್ವರನೊಪ್ಪ' ಎಂದು ಗಂಡನನ್ನು ಟೀಕಿಸುವಳು. ಗುಮ್ಮಳಾಪುರದ ಸಿದ್ಧಲಿಂಗಯತಿಯು ಕಾಯಕಕ್ಕೆ ಪ್ರಾಧಾನ್ಯಕೊಟ್ಟ ಪ್ರಸಂಗದ ಮೂಲಸೂತ್ರಗಳಾಗಿ ಕಾಯಕದ ಮೇಲಿನ ಶ್ರದ್ಧೆ, ದುರಾಸೆ ಇಲ್ಲದ ಬದುಕು ಹಾಗೂ ಸ್ವಯಿಚ್ಛೆಯಿಂದ ಬಡತನವನ್ನು ಪ್ರೀತಿಸುವುದು ಈ ಮೂರು ಅಂಶಗಳನ್ನು ಇಲ್ಲಿ ಮುಖ್ಯವಾಗಿ ಪ್ರತಿಪಾದಿಸಿದ್ದಾನೆ. ಇವು ಲಕ್ಕಮ್ಮನ ತ್ಯಾಗಮಯ ಬದುಕಿನಲ್ಲಿ ಕಾಯಕತತ್ತ್ವದ ಅನುಷ್ಠಾನದಲ್ಲಿ ಬಡತನವನ್ನು ಹೃದಯಾರೆ ಸ್ವಾಗತಿಸುವ ಆದರ್ಶವಿದೆ. 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದಡೆ ಉಳಿಯ ಮೊನೆಯಲ್ಲಿ ಬಡತನವಿರ್ದಡೆ ಒಡೆಯದೆ ?' ಎಂದು ಪ್ರಶ್ನಿಸುವ ಅವಳ ಆ ಪ್ರಶ್ನೆಗೆ ಉತ್ತರವೂ ಅಲ್ಲೇ ಇದೆ. ಇಲ್ಲಿ ಬೆಟ್ಟವು ಕಷ್ಟಕಾರ್ಪಣ್ಯಗಳಿಗೆ ಅರ್ಥಪೂರ್ಣಸಂಕೇತವಾದರೆ, ಅದನ್ನು ಒಡೆದು ಪುಡಿಪುಡಿ ಮಾಡುವ ಉಳಿಯ ಮೊನಚನ್ನು ಬಡತನದ ಘನತೆಗೆ ಸಂಕೇತಿಸುವಳು. ಅವಳ ಗಟ್ಟಿ ನಿರ್ಧಾರ 'ಘನ ಶಿವಭಕ್ತರಿಗೆ ಬಡತನವಿಲ್ಲ, ಸತ್ಯಂಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯಪ್ರಿಯ ಅಮಲೇಶ್ವರ-ಲಿಂಗವುಳ್ಳನ್ನಕ್ಕ ನನಗಾರ ಹಂಗಿಲ್ಲ' ಎನ್ನುವ ಮಾತಿನಲ್ಲಿ ವ್ಯಕ್ತವಾಗುತ್ತದೆ. ಸಂತೃಪ್ತಿಯ ಬದುಕಿಗೆ ಬಡತನ ಅಡ್ಡಿಯಲ್ಲ ಎನ್ನುವ ಅವಳು ಶ್ರೀಮಂತಿಕೆಯನ್ನು ಬಯಸದೆ ಬಡತನದಲ್ಲೇ ಆನಂದ ಹಾಗೂ ಶಿವನನ್ನು ಕಾಣುವ ಧೀಮಂತ ನಿಲವನ್ನು ವ್ಯಕ್ತಪಡಿಸಿರುವಳು. ಭಕ್ತಂಗೆ ಬಡತನವುಂಟೆ ? ಎಂದು ಪ್ರಶ್ನಿಸಿ, ಭಕ್ತರು ಬಡವರೆಂದು ಮತ್ತೊಂದ ಕೊಟ್ಟಿಹನೆಂದಡೆ, ಮಾರಯ್ಯಪ್ರಿಯ ಅಮಲೇಶ್ವರಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ' ಎಂದು ವೀರನಿರ್ಧಾರ ಪ್ರಕಟಿಸುವ ಲಕ್ಕಮ್ಮನ ಸಾತ್ವಿಕ ನಿಲುವು ಶರಣ ಯುಗದ ಸಾಮಾಜಿಕ ಬದುಕಿನ ಅಂತರಂಗ ಶ್ರೀಮಂತಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಅವಳು ಕಾಯಕಕ್ಕೂ ಭಕ್ತಿಗೂ ಸಂಬಂಧ ಕಲ್ಪಿಸುವಳು. ಭಾವಶುದ್ಧವಿರುವ ಭಕ್ತಿ ಶಿವನಿಗೆಪ್ರಿಯವಾದುದು, ಭಾವಶುದ್ಧವಿಲ್ಲದ ಕಾಯಕ ಹಾಗೂ ಭಕ್ತಿ ಎರಡೂ ಶಿವನನ್ನು ಮುಟ್ಟುವುದಿಲ್ಲವೆನ್ನುವಳು. ಕಾಯಕ ಹಾಗೂ ಭಕ್ತಿ ಎರಡರಲ್ಲೂ ಅಹಂಕಾರದ ಮುಳ್ಳು ಮೊನೆಯಷ್ಟೂ ಇರಬಾರದೆನ್ನುವ ಅವಳ ತಾತ್ವಿಕ ವಿಚಾರ ಗಂಭೀರ ಪರಿಶೀಲನೆಗೆ ಅರ್ಹವಾಗಿದೆ.

ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ ದಂಪತಿಗಳು ಸಾಮಾನ್ಯರಲ್ಲಿ ಸಾಮಾನ್ಯರು. ಮಾರಯ್ಯ ಕಾಯಕನಿಷ್ಠನು. ಅವನನ್ನು ಬೆಂಬಲಿಸಿ ನಿಂತವಳು ಲಕ್ಕಮ್ಮ. ಅವನು ತಪ್ಪು ಮಾಡಿದಾಗ ಸರಿದಾರಿಗೆ ತಂದು, ಲಿಂಗಾಂಗ ಸಾಮರಸ್ಯದ ಮಾರ್ಗವನ್ನು ತೋರಿದವಳು. ಅವಳ ಬಾಹ್ಯ ಬದುಕು ಬಡತನದ್ದು, ಆದರೆ, ಅವಳ ಅಂತರಂಗ ಶ್ರೀಮಂತಿಕೆಯದು. ಅವಳು ಬಡತನದಲ್ಲಿಯೂ ಸಂತೃಪ್ತಿಯ ಬೆಳಕು ಗಂಡನಿಗೂ ಅದನ್ನೇ ತಿಳಿಸುವಳು. ಅವಳಿಗೆ ಕಾಯಕ-ದಾಸೋಹವೆನ್ನುವುದು ಅವಳಿ ಕ್ರಿಯೆಗಳು,

ಮರ್ತ್ಯ ಕೈಲಾಸವೆನ್ನುವ ತಾರತಮ್ಯವನ್ನು ಯೋಚಿಸದೇ ತನ್ನ ಕಡು ಬಡತನದಲ್ಲೂ ಬಸವಣ್ಣನ ಮಹಾಮನೆಯ ಶರಣಗಣಂಗಳಿಗೆ ದಾಸೋಹ ನಡೆಸಿದವಳು, ಇಂತಹ ಮಾರಯ್ಯನ ಪತ್ನಿ ಲಕ್ಕಮ್ಮಳ ರತ್ನದ ಪ್ರಭೆಯ ಬೆಳಗು ಎಲ್ಲೆಡೆ ಹರಡುವಂತೆ ಕಡೆದು ನಿಲ್ಲಿಸಿದ ಯಶಸ್ಸು ಗುಮ್ಮಳಾಪುರದ ಸಿದ್ಧಲಿಂಗಯತಿಗೆ ಸಲ್ಲುತ್ತದೆ.

ಪ್ರಭುದೇವರ ವಿಚಾರದಲ್ಲಿ ಮೂಲ ಶೂನ್ಯಸಂಪಾದನೆಯಲ್ಲಿ ಪ್ರಭುದೇವರು ಎಲ್ಲ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಆದರೆ ಮುಂದಿನವರ ಶೂನ್ಯಸಂಪಾದನೆಗಳಲ್ಲಿ ಹೊಸದಾಗಿ ಸೇರಿದ ನುಲಿಯ ಚಂದಯ್ಯ, ಆಯ್ದಕ್ಕಿಮಾರಯ್ಯ, ಘಟ್ಟಿವಾಳಯ್ಯರ ಪ್ರಸಂಗಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿಲ್ಲ.

ಗುಮ್ಮಳಾಪುರದ ಸಿದ್ಧಲಿಂಗಯತಿಯಲ್ಲಿ ಮಹಾದೇವಿಯಕ್ಕನ ಪ್ರಸಂಗ ವಿಸ್ತೃತವಾಗಿ ಬಂದಿದೆ. ''ಶಿವಗಣಪ್ರಸಾದಿ ಮಹಾದೇವಯ್ಯನಲ್ಲಿ ಈ ಪ್ರಸಂಗ ಅಕ್ಕ ಕಲ್ಯಾಣವನ್ನು ಬಿಟ್ಟು ಹೊರಡುವವರೆಗೆ ಮಾತ್ರ ಇದ್ದರೆ ಹಲಗೆಯಾರ್ಯ ಆಕೆ ಶ್ರೀಶೈಲಮಲ್ಲಿಕಾರ್ಜುನನಲ್ಲಿ ಐಕ್ಯಳಾಗುವವರೆವಿಗೆ ವಿಸ್ತರಿಸಿದ್ದಾನೆ. ಇದನ್ನೇ ಸಿದ್ಧಲಿಂಗಯತಿಗಳು ಬಳಸಿಕೊಂಡಿದ್ದಾರೆ. ಅಲ್ಲಲ್ಲಿ ತಮಗೆ ಖಚಿತವೆನಿಸಿದ ಪುಟ್ಟಬದಲಾವಣೆಗಳನ್ನು ಮಾಡಿಕೊಂಡಿರುವರು..... '' (ಅದೇ, ಪು. 94). ಗುಮ್ಮಳಾಪುರದ ಸಿದ್ಧಲಿಂಗಯತಿಯ ಪ್ರಕಾರ ಮಹಾದೇವಿಯಕ್ಕಳು ಮರ್ತ್ಯಮಾನವಿಯಲ್ಲ, ಕೌಶಿಕನ ಜೊತೆ ಕೆಲವು ಕಾಲ ಬದುಕು ನಡೆಸಿದವಳಲ್ಲ. ಅವಳು ಸಿದ್ಧಲಿಂಗಯತಿಯ ನಂಬುಗೆಯಂತೆ ಶಿವನ ನಿರೂಪದಿಂದ ಕೈಲಾಸದ ರುದ್ರಕನ್ನಿಕೆಯಾಗಿ ಮರ್ತ್ಯದಲ್ಲಿ ಹುಟ್ಟಿ ಉಡುತಡಿಯ ಮಹಾದೇವಿಯೆನ್ನುವ ಹೆಸರನ್ನು ಹೊಂದಿದವಳು. ಅವಳು ವಿರಾಗಿಣಿ. ಅಂಗಸಂಗವನ್ನು ತೊರೆದು ಲಿಂಗಸಂಗದಲ್ಲಿ ಅವಿರಳಸಂಗಿಯಾಗಿ ತನ್ನ ಹದಿನಾರನೆಯ ವಯಸ್ಸಿನಲ್ಲಿ ದಿಗಂಬರದುಡಿಗೆಯನುಟ್ಟು ಮುಸುಕಿಟ್ಟು ಕರಸ್ಥಲದಲ್ಲಿನ ಇಷ್ಟಲಿಂಗದಲ್ಲಿ ದೃಷ್ಟಿನಟ್ಟು ಮಹಾವೈರಾಗ್ಯದಿಂದ ಲೋಕಸಂಚಾರಿಯಾದವಳು. ಕಿನ್ನರಿ ಬೊಮ್ಮಯ್ಯ ಅಕ್ಕನನ್ನು ಪರೀಕ್ಷಿಸಿದ ಸಂದರ್ಭವು ಗುಮ್ಮಳಾಪುರದ ಸಿದ್ಧಲಿಂಗ ಯತಿಗೆ ಸ್ವಲ್ಪ ಮಟ್ಟಿಗೆ ಮರ್ಯಾದೆಯ ಗೆರೆಯನ್ನು ದಾಟಿದ್ದು ಎಂದೆನಿಸಿದ್ದು, ಸ್ವಲ್ಪ ಬದಲಾವಣೆ ಮಾಡಿಕೊಂಡಿರುವನು. ಅಕ್ಕಳು ಕಲ್ಯಾಣಕ್ಕೆ ಬಂದಾಗ ಅಲ್ಲಮಪ್ರಭು ಸಕಲ ಪ್ರಮಥರಿಗೆ ಆಕೆ ಕಾಮಸಂಹಾರಿ ಎನ್ನುವುದನ್ನು ತಿಳಿಯಪಡಿಸಲು ಪರಮಜ್ಞಾನಿಯಾದ ಕಿನ್ನರಯ್ಯಗಳನ್ನು ಒಪ್ಪಿ ಕಳುಹಿಸುವನು. ಕಿನ್ನರಯ್ಯನು ಅಕ್ಕಮಹಾದೇವಿಯ ಇದಿರಿಗೆ ಬಂದು, ಕಂಡು ಭಕ್ತಿಭಾವದಿಂದ ಅವಳನ್ನು ಪರೀಕ್ಷಿಸುವನು. ಆಗ ಮಹಾದೇವಿಯಕ್ಕಗಳು ತಮ್ಮ ಅಂತರಂಗದ ಜ್ಞಾನಾಗ್ನಿಯಿಂದ ಕಾಮನನ್ನು ಸುಟ್ಟು ಭಸ್ಮವನ್ನು ಮಾಡಿ ಕಿನ್ನರಯ್ಯಗಳಿಗೆ ತೋರಿಸುವಳು.

ಅಕ್ಕಮಹಾದೇವಿಯ ಪ್ರಸಂಗದ ನಂತರ ಪ್ರಭುದೇವರು ಚೆನ್ನಬಸವಣ್ಣ ಮಡಿವಾಳಮಾಚಿತಂದೆಗಳಿಗೆ ಮಹಾಜ್ಞಾನವನ್ನು ಬೋಧಿಸಿ ಸಕಲ ಪುರಾತರ ಕೃತಾರ್ಥರನ್ನಾಗಿಮಾಡಿ, ಸಿದ್ಧರಾಮಯ್ಯದೇವರಿಗೆ ನಿಜಸಮಾಧಿಯ ನಿರ್ಣಯವನ್ನು ತಿಳಿಸಿ ಸೊನ್ನಲಿಗೆಗೆ ಅವನನ್ನು ಕಳುಹಿಸಿ ದೇಶಪರ್ಯಟನೆಗೆ ಹೊರಡುವನು. ದೇಶ ದೇಶಾಂತರಗಳನ್ನು ಸುತ್ತಿ ಹನ್ನೆರಡು ವರ್ಷಗಳ ಅನಂತರ ಕಲ್ಯಾಣಕ್ಕೆ ಪ್ರಭುವು ಎರಡನೆ ಬಾರಿ ಬರುವನು. ಅವನ ವಿಕೃತ ಮಾಯಾವೇಷದಲ್ಲೂ ಬಸವಣ್ಣ ಪ್ರಭುವನ್ನು ಗುರುತಿಸುವನು. ಅವನನ್ನು ಗೌರವಪೂರ್ವಕವಾಗಿ ಇದಿರುಗೊಂಡು ತನ್ನ ಮಹಾಮನೆಗೆ ಕರೆದು ತರುವನು.

ಪೂಜಾನಂತರ ಪ್ರಭುವಿಗೆ ಆರೋಗಣೆ ಮಾಡಲು ಹೊರಟಾಗ ನಡೆಯುವ ವಿಸ್ಮಯಕಾರಿ ಘಟನಾವಳಿಗಳೆಲ್ಲ ಹಲಗೆಯಾರ್ಯನಲ್ಲಿ ಬಂದಂತೆಯೇ ಗುಮ್ಮಳಾಪುರದ ಸಿದ್ಧಲಿಂಗನಲ್ಲೂ ಬರುತ್ತದೆ. ಮುಂದಣ ಭಾಗಗಳೆಲ್ಲ ಶಿವಶರಣರು ಪರಸ್ಪರ ಸ್ತುತಿಮಾಡಿದುದು, ಪರಾಮರಿಕೆಯ ವಿವರಗಳಿಂದ ತುಂಬಿಹೋಗಿವೆ. ಬಸವರಾಜ, ಚೆನ್ನಬಸವಣ್ಣ, ಪ್ರಭುದೇವರು ಮೊದಲಾದ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ತಮ್ಮ ನಿಜಪದದ ನಿಜೈಕ್ಯವನ್ನು ಹೇಳುವರು. ಪ್ರಭುದೇವನು ಅದನ್ನು ಕೇಳಿ ತನ್ನ ನಿಜಪದವನ್ನೂ ಹೇಳಿ, ಮತ್ತೆ ಎಲ್ಲಾ ಅಸಂಖ್ಯಾತರಿಗೆ ನಿರ್ವಾಹ ಸ್ಥಿತಿಗತಿಯ ನಿರೂಪಿಸಿ

ಅವರಿಂದ ಬೀಳ್ಕೊಂಡು ಕಲ್ಯಾಣವನ್ನು ಬಿಟ್ಟು ಶ್ರೀಪರ್ವತಕ್ಕೆ ನಡೆಯುವನು.

ಶ್ರೀ ಪರ್ವತದಲ್ಲಿ ಅಲ್ಲಮಪ್ರಭು–ಗೋರಕ್ಷರ ಭೇಟಿಯನ್ನು ಸಂಗ್ರಹವಾಗಿ ಗುಮ್ಮಳಾಪುರದ ಸಿದ್ಧಲಿಂಗ ನಿರೂಪಿಸುವನು. ಗೋರಕ್ಷನ ಜೊತೆ ಸಂಭಾಷಿಸಿ ಅವನ ವಜ್ರದೇಹವನ್ನು ತನ್ನ ಅಸಿತಾಳಪತ್ರದಿಂದ ಹೊಯ್ದು ನೋಡಿ, ಅವನ ಕಾಯಸಿದ್ಧಿಯನ್ನು ಜರಿದು, ಅವನ ಮನಃಪರಿವರ್ತನೆ ಮಾಡಿ, ಅವನಿಗೆ ಉಪದೇಶ ನೀಡುವನು. ಅವನಿಗೆ ನಿರ್ವಯಲ ಸಮಾಧಿಯ ಭೇದವನ್ನು ನಿರೂಪಿಸಲು, ಗೋರಕ್ಷನು ಲಿಂಗಾಂಗ ಸಂಬಂಧದಜೊತೆಗೆ ತಿಳಿವಳಿಕೆಯನ್ನು ಪ್ರಭುವಿನಿಂದ ಪಡೆಯುವನು. ಪ್ರಭುವು ಶ್ರೀಶೈಲದಲ್ಲಿ ನಿಜಪದವನ್ನು ಹೊಂದಲು ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಿತಂದೆ, ಸೊಡ್ಡಳ ಬಾಚರಸರು ಪ್ರಭುವಿನ ಗುಣಗಾನ ಮಾಡುವರು.

ಸೊಡ್ಡಳ ಬಾಚರಸನ ಲಿಂಗೈಕ್ಯಾನಂತರ ಗುಮ್ಮಳಾಪುರದ ಸಿದ್ಧಲಿಂಗರಲ್ಲಿ ಕಲ್ಯಾಣದಲ್ಲಿ ನಡೆದ ಅಹಿತಕರಘಟನಾವಳಿಗಳ ವಿವರ 22 ಸಾಲುಗಳ ಗದ್ಯದಲ್ಲಿ ಬರುತ್ತದೆ. ಇದು ಹಲಗೆಯಾರ್ಯನಶೂನ್ಯ ಸಂಪಾದನೆಯಲ್ಲಿ ಬಂದಿಲ್ಲ. ಬಹುಮಟ್ಟಿಗೆ ಈ ವಿವರಗಳನ್ನು ಗುಮ್ಮಳಾಪುರದ ಸಿದ್ಧಲಿಂಗರು ಭೀಮಕವಿಯ (1369) ಬಸವಪುರಾಣದಿಂದ ಸ್ವೀಕರಿಸಿದಂತಿದೆ. ಈ ಗದ್ಯದಲ್ಲಿ ಹರಳಯ್ಯ–ಮಧುವಯ್ಯರ ಪ್ರಸ್ತಾಪ ಬಂದಿದೆ. ಅವರು ಶಿವತತ್ತ್ವ ಸಂಬಂಧಿಗಳು, ಲಿಂಗನಿಷ್ಠಾಪರರು, ಗುರು–ಲಿಂಗ–ಜಂಗಮಸೇವಾತತ್ಪರರು, ತ್ರಿವಿಧ ಪ್ರಸಾದಿಗಳು, ಕಲ್ಯಾಣದಲ್ಲಿ ಬಸವ ಹಾಗೂ ತಾವು ಮಂಗಳಪ್ರದವಾದ ಭಕ್ತಿಗೋಷ್ಠಿ ಸುಸಂಗತಿಯಲ್ಲಿ ಆನಂದದಿಂದ ಪ್ರವರ್ತಿಸುತ್ತಿದ್ದರು. ಹೀಗಿರಲು ಬಿಜ್ಜಳನು ಯಮುನಪಟ್ಟಣಕ್ಕೆ ಹೋಗಲೆಂದು ಬಯಸಿ ಬಸವಣ್ಣನ ಮಹಿಮೆ ಹಾಗೂ ಭಕ್ತಿಯ ಹೆಚ್ಚಳವನ್ನು ತಿಳಿದೂ ತಿಳಿಯದೆಯೆ ಅಜ್ಞಾನ ಮದದಿಂದ ಮುಂದುಗಾಣದ ಹರಳಯ್ಯ–ಮಧುವಯ್ಯಗಳ ಚರಿತ್ರ ನೀತಿಯಲ್ಲವೆಂದು ವಿಚಾರಮಾಡಿ ಬಸವಣ್ಣನವರ ಜೊತೆ ವಾದಮಾಡುವನು. ಬಸವಣ್ಣನು ಹಲವಾರು ಬಗೆಯಲ್ಲಿ ದೃಷ್ಟಾಂತಕೊಟ್ಟು ವಿವರಿಸಿದರೂ ನಂಬಿಕೆಯಾಗದೆ ಮರುಳ ಬಿಜ್ಜಳ ಕೋಪಾಟೋಪದಿಂದ ಹರಳಯ್ಯ–ಮಧುವಯ್ಯಗಳನ್ನು ಕರೆಯಿಸಿ ಅವರ ಕಣ್ಣು ಕೀಳಿಸುವನು; ಆ ಸದ್ಭಕ್ತರ ಮಹಿಮೆಯನ್ನೂ ಶ್ರೇಷ್ಠತ್ವವನ್ನೂ ತಿಳಿಯದೆ ಅವರನ್ನುನೋಯಿಸುವನು. ಇನ್ನು ಬಿಜ್ಜಳನ ಸೈನ್ಯ ನಾಶವಾಗುವುದು, ಶಿವನ ಭಕ್ತರು ಮುನಿದರೆ ಜೀವಂತವಾಗಿರುವನೆ ಎಂದು ದುಃಖಿತರಾದ ಅನೇಕರು ಗುಜುಗುಜಿಸುತ್ತಿರಲು, ಬಸವಣ್ಣನು ಬಸವರಾಜನು ಶರಣ ಸಂಕುಳವೆರಸಿ ಜಗದೇವಯ್ಯಗಳೇ ಆ ಸದ್ಭಕ್ತನಳಿದ ದ್ರೋಹಿಯನಪಹರಿಸಿ ನನ್ನಿಯಂ ಮೆರೆ' ಎನುತ ಜಗದೇವರಿಗೆ ಬೆಸನಿತ್ತು–ಲೋಕಪಾಲಕನ ನೊಸಲ ಬರಹವನೊರಸಲೊಡನೆ ಇತ್ತಲು ಕೂಡಲಸಂಗಮದೇವರು ತಮ್ಮ ಕವಳಿಗೆ ತೊಡೆದಾರೆಂದು ಬಸವೇಶ್ವರನು ಶರಣ ಜನಂಗಳೊಡನೆ ನಿರೂಪಿಸುತ್ತ ಇಲ್ಲಿ ಇವರವರೆನ್ನದೆ ನೀವೆಲ್ಲಾ ಕೇಳಿ ಈ ಕ್ಷಣದೊಳ್ ರಾಜರ ಸಾಮ್ರಾಜ್ಯವುಂ, ಕಲ್ಯಾಣಪಟ್ಟಣವೆಲ್ಲವುಂ, ಹಾಳಹುದೆಂದು ದಿಟವನ ಸೊಲ್ಲಿಸಿದನೆಂದು ಸಕಲ ಗಣಂಗಳಿಗೆ ಬಿನ್ನೆಸುವ ವಚನ. ಬಸವಣ್ಣನ ಲಿಂಗೈಕ್ಯಾನಂತರ ಚೆನ್ನಬಸವಣ್ಣ ಮಡಿವಾಳ ಮಾಚಿತಂದೆಗಳು ಬಸವಣ್ಣನವರಿಗೆ ತುಂಬಿದಹೃದಯದಿಂದ ತಮ್ಮ ಭಾಷ್ಪಾಂಜಲಿ ಸಲ್ಲಿಸುವರು. ಮಹಾಗಣಂಗಳು ಉಳುವೆಯ ಮಹಾಮನೆಯಲ್ಲಿ ನಿರ್ವಯಲಾಗುವರು. ಮಡಿವಾಳ ಮಾಚಿತಂದೆ, ಚನ್ನಬಸವಣ್ಣನವರ ಐಕ್ಯದೊಂದಿಗೆ ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ ಮುಗಿಯುತ್ತದೆ.

ಶಿವಶರಣರ ಅಸಂಖ್ಯಾತ ವಚನಗಳನ್ನು ಬಳಸಿಕೊಂಡು ಜೀವನಮೌಲ್ಯಗಳನ್ನು ಭಾವನಾತ್ಮಕವಾಗಿ ತಿಳಿಸಿಹೇಳುವ ಪ್ರಯತ್ನದಲ್ಲಿ ಗುಮ್ಮಳಾಪುರದ ಸಿದ್ಧಲಿಂಗಯತಿಯು ಮಹತ್ವದ ಪಾತ್ರವಹಿಸಿರುವರು.

ಮೊದಲ ಇಬ್ಬರು ಶೂನ್ಯ ಸಂಪಾದನಾಕಾರರಿಗೆ ಕಲ್ಯಾಣಕ್ರಾಂತಿಯ ಕೊನೆಯ ದಿನಗಳ ವಿವರ ಕೊಡುವ ಅಗತ್ಯ ಕಂಡುಬರಲಿಲ್ಲ. ಏಕೆಂದರೆ, ಶಿವಶರಣರು ಕಲ್ಯಾಣದ ಮಹಾಮನೆಯಲ್ಲಿ ಲಿಂಗಾಂಗಸಾಮರಸ್ಯದ ರಹಸ್ಯವನ್ನು ತಿಳಿದು, ಲಿಂಗದಲ್ಲಿ ಒಡವೆರೆದ ಸಂಗತಿ ಅವರಿಗೆ ಮುಖ್ಯವಾಗಿದ್ದಿತು. ಗುಮ್ಮಳಾಪುರದ ಸಿದ್ಧಲಿಂಗಯತಿಗೆ ಶರಣರ ಲಿಂಗಾಂಗಸಾಮರಸ್ಯದ ಅರಿವಿನ

ಜೊತೆಗೆ ಕಲ್ಯಾಣದಲ್ಲಿ ಧಾರ್ಮಿಕ ಕಾರಣಕ್ಕಾಗಿ ನಡೆದ ಹರಳಯ್ಯ-ಮಧುವಯ್ಯಗಳ ಅಮಾನುಷ ಕೊಲೆ ಹಾಗೂ ಅದರ ಪರಿಣಾಮವಾಗಿ ಬಿಜ್ಜಳನ ಸಾವಿನೊಂದಿಗೆ ಕಲ್ಯಾಣ ಹಾಳಾದುದರ ದಾರುಣ ಘಟನಾವಳಿಗಳನ್ನುತಿಳಿಸುವ ಅಗತ್ಯವೂ ಕಂಡುಬಂದಿತು. ಶರಣಧರ್ಮದ ಪಂಚಾಚಾರಗಳಲ್ಲಿ ಕೊನೆಯದಾದ ಗಣಾಚಾರ ನಿಷ್ಠಾಪೂರ್ಣ ಪರಿಪಾಲನೆಗಾಗಿ ಬಿಜ್ಜಳ ಹಾಗೂ ಬಸವಣ್ಣನ ಸಾವಿಗೆ ಸಂಬಂಧ ಕಲ್ಪಿಸುವರು. ಅವರಿಗೆ ಆ ಘಟನೆಗಳ ಹಿಂದಿನ ಸತ್ಯಾಸತ್ಯತೆಯ ಪ್ರಶ್ನೆಗಿಂತ ಹೀಗೆ ನಡೆದಿರಬಹುದಾದ ಬಸವಣ್ಣನ ಕಲ್ಯಾಣವು ಕಂಡ ದುರಂತವು ಅವರ ಮನಸ್ಸನ್ನು ಆವರಿಸಿದಂತೆ ತೋರುತ್ತದೆ. ಅದು ಸುಖಾಂತವಲ್ಲ, ದುಃಖಾಂತ. ಶರಣರ ಸಂಘಟನೆಯಿಂದ ಕಲ್ಯಾಣದಲ್ಲಿ ನಡೆದ ಸಾಮಾಜಿಕ-ಧಾರ್ಮಿಕ-ಸಾಹಿತ್ಯಕ ಚಟುವಟಿಕೆಗಳು ಕಾಣದ ಕೈವಾಡದಿಂದಾಗಿ ಅಂತ್ಯ ಕಂಡುಕೊಂಡ ಅಸಹನೀಯ ನೋವಿನ ಎಳೆ ಅವರ ಮನಸ್ಸಿನಮೇಲೆ ಪರಿಣಾಮ ಬೀರಿದಂತಿದೆ. ವಾಸ್ತವವಾಗಿ ಏನು ನಡೆಯಿತೆಂಬುದು ಅವರಿಗೂ ನಿಚ್ಚಳವಾಗಿ ತಿಳಿಯದು. ಆದರೆ, ಬಸವಪುರಾಣದಂತಹ ಕೃತಿ ಕಟ್ಟಿಕೊಟ್ಟ ಆ ದುರಂತ ಕಥೆಯನ್ನು ಸತ್ಯವೆಂದು ನಂಬುವಂತಹ ಮಟ್ಟಕ್ಕೆ ಅವರನ್ನು ಕರೆದೊಯ್ದಿದೆ. ಶರಣಧರ್ಮಪರವಾದ ಈ ಶೂನ್ಯಸಂಪಾದನಕಾರರ ನಿಲುವು ಬಸವಣ್ಣನ ಕಳಂಕರಹಿತ ಶುಭ್ರ ಸ್ಪಟಿಕ ವ್ಯಕ್ತಿತ್ವಕ್ಕೆ ಕುಂದನ್ನುಂಟುಮಾಡುವ ಪ್ರಯತ್ನವೆಂದು ಅವರು ಯೋಚಿಸಲೇ ಇಲ್ಲ.'' (ಇದೇ ಕೃತಿಯಪುಟ-483) ಎನ್ನುವಲ್ಲಿ ಈ ಸೂಚನೆಯನ್ನು ಕಾಣುತ್ತೇವೆ. ಶಿವಗಣ ಪ್ರಸಾದಿ ಮಹಾದೇವಯ್ಯ ಹಾಗೂ ಹಲಗೆಯಾರ್ಯರಲ್ಲಿ ಇಲ್ಲದ ಬಿಜ್ಜಳ ಕೊಲೆಗೆ ಬಸವಣ್ಣ ಶಿವಭಕ್ತರೊಡಗೂಡಿ ಸೂಚನೆ ಕೊಟ್ಟನೆಂಬ ಸಂಗತಿಯನ್ನು ಕಲ್ಪಿಸಿಕೊಳ್ಳಲಾಗಿದೆ.

ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯಲ್ಲಿ ಅಲ್ಲಮಪ್ರಭು, ಮುಕ್ತಾಯಕ್ಕ, ಸಿದ್ಧರಾಮ, ಬಸವಣ್ಣ, ಚೆನ್ನಬಸವಣ್ಣ, ಮರುಳಶಂಕರದೇವ, ಮಡಿವಾಳ ಮಾಚಿದೇವ, ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮ, ನುಲಿಯ ಚಂದಯ್ಯ-ಅಕ್ಕಮಹಾದೇವಿಯರು ಪರಿಪೂರ್ಣ ಶೂನ್ಯವನ್ನು ಸಂಪಾದಿಸಿದ ಸ್ಥಿತಿಯನ್ನು ನಿರೂಪಿಸಲಾಗಿದೆ. ಎಚ್. ತಿಪ್ಪೇರುದ್ರಸ್ವಾಮಿಗಳು ಶೂನ್ಯತತ್ವ ಮತ್ತು ''ಶೂನ್ಯಸಂಪಾದನೆ'' ಕೃತಿಯಲ್ಲಿ ಹೇಳುವಂತೆ ''ಅಲ್ಲಮನದು ಮುಗಿಲುಮುಟ್ಟುವ ನಿಲುವು, ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿಲ್ಲದ ರುಚಿ, ಭಾವವೇ ಖರ್ಪರವಾಗಿ ಸಂಚರಿಸುವ ಮಹಾಂತ ಜಂಗಮನ ನಿಲುವಾದರೆ, ಮುಕ್ತಾಯಕ್ಕನದು ಮಹಿಳಾ ಸಾಧಕಿಯರ ಅಗ್ರಪಂಕ್ತಿಯಲ್ಲಿ ಶಿವಯೋಗ ಸಾಧಕಿಯಾಗಿ ಕಂಗೊಳಿಸಿದ ನಿಲುವಾಗಿದೆ. ಅದೇರೀತಿ ತನ್ನತನವನ್ನು ಸಂಪೂರ್ಣವಾಗಿ ಇಲ್ಲವಾಗಿಸಿ, ಕರ್ಮಯೋಗಿ-ಶಿವಯೋಗಿಯಾದವನು ಸಿದ್ಧರಾಮ. ಬಸವಣ್ಣನ ಭಕ್ತಿಹೃದಯ-ಜಂಗಮನಿಷ್ಠೆಗಳು, ಮಹಾಜ್ಞಾನಿ ಎನಿಸಿಕೊಂಡ ಚೆನ್ನಬಸವಣ್ಣ'' ಹೀಗೆ ಇಲ್ಲಿ ಬರುವ ಶರಣರ ವ್ಯಕ್ತಿತ್ವವನ್ನು, ಅವರ ಆತ್ಮಮುಖಿ-ಸಮಾಜಮುಖಿ ಗುಣವನ್ನು ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ. ಶೂನ್ಯಸಂಪಾದನೆಯಲ್ಲಿ ಬರುವ ವಿವಿಧ ಪ್ರಸಂಗಗಳಲ್ಲಿ ಅಂದರೆ, ಮುಕ್ತಾಯಕ್ಕನ ಪ್ರಸಂಗದಲ್ಲಿ ಬರುವ ಗುರುಕರುಣೆಯ ಮಹತ್ವ, ಸಿದ್ಧರಾಮರ ಪ್ರಸಂಗದಲ್ಲಿ ಬರುವ ಇಷ್ಟಲಿಂಗದ ಶ್ರೇಷ್ಠತೆ, ಹಾಗೂ ಆಧ್ಯಾತ್ಮಿಕ ಆನಂದ ಅನುಭಾವ, ಗುಪ್ತಭಕ್ತ ಮರುಳ ಶಂಕರನ ಗುಪ್ತಭಕ್ತಿಯಿಂದ ಗಳಿಸಿದ ಸಂಪಾದನೆಯ ನಿಲುವು, ಮಡಿವಾಳ ಮಾಚಿದೇವ, ಮಾರಯ್ಯ, ಚಂದಯ್ಯಗಳ ಕಾಯಕ ನಿಷ್ಠೆ, ಘಟ್ಟಿವಾಳಯ್ಯನ ನಿಷ್ಟುರವಾದ ಸತ್ಯ ಪ್ರತಿಪಾದನೆ ಇತ್ಯಾದಿಗಳಲ್ಲಿ ಅಂತರಂಗದನುಭವವನ್ನು, ಅನುಭಾವವನ್ನು ಧರ್ಮಸಿದ್ಧಾಂತದ ಹಾಗೂ ಸಾಮಾಜಿಕ ಚಿಂತನೆಯ ಚೌಕಟ್ಟಿನಲ್ಲಿ ಪ್ರತಿಪಾದಿಸಿರುವುದನ್ನು ಗುರುತಿಸಬಹುದು. ಧಾರ್ಮಿಕ ಸಾಧನೆಯ ಮಹತ್ವವು ಶರಣರ ನಿತ್ಯ ಜೀವನದಲ್ಲಿಯೇ ಕಾಣಬರುತ್ತದೆಂಬುದನ್ನು ಶೂನ್ಯಸಂಪಾದನೆಯಲ್ಲಿ ಕಾಣಬಹುದು. ಜೀವನದಲ್ಲಿ ವ್ಯಕ್ತಿ ಸತ್ಯಶುದ್ಧ ಕಾಯಕದಲ್ಲಿ ನಿರತನಾಗಿದ್ದರೆ ಅವನು ಯಾವುದೇ ರಂಗದಲ್ಲಿದ್ದರೂ ಏನೇ ಉದ್ಯೋಗವನ್ನು ಅವಲಂಬಿಸಿದ್ಧರೂ ಆತನ ಸಾಧನೆಗೆ ಪ್ರಗತಿಗೆ ಅಡ್ಡಿಯಾಗುವುದಿಲ್ಲ ಎಂಬುದು ವ್ಯಕ್ತವಾಗಿದೆ. ಶೂನ್ಯಸಂಪಾದನೆಯಲ್ಲಿ ಆಧುನಿಕ ಯುಗದ ಮನೋಧರ್ಮಕ್ಕೆ ಹತ್ತಿರವಾದುದ್ದು ಎಂದರೆ ಸ್ವತಂತ್ರ ವಿಚಾರಶೀಲತೆ ಮತ್ತು ಸತ್ಯ ನಿಷ್ಠುರತೆ.

**ಶೂನ್ಯಸಂಪಾದನೆಯಲ್ಲಿ ಬಂದಿರುವ ಸ್ತ್ರೀ ಪಾತ್ರಗಳು:**

ಶಿವಗಣಪ್ರಸಾದಿ ಮಹಾದೇವಯ್ಯನಿಂದ ಪ್ರಾರಂಭವಾದ ಶೂನ್ಯಸಂಪಾದನೆಯ ರಚನಾ ಸೃಷ್ಟಿಯು ನಂತರ ಮೂರುಪರಿಷ್ಕರಣಗಳನ್ನು ಪಡೆದುಕೊಂಡಿತು. ಹೀಗೆ ಪರಿಷ್ಕರಣಗೊಂಡರೂ ಸಹ ಸ್ತ್ರೀಪಾತ್ರಗಳ ದೃಷ್ಟಿಯಿಂದ ನೋಡಿದರೆ ನಾಲ್ಕೂ ಶೂನ್ಯಸಂಪಾದನೆಗಳಲ್ಲಿ ಸ್ತ್ರೀಪಾತ್ರಗಳ ಸಂಖ್ಯೆ ಕಡಿಮೆ. ಆದರೂ ಬಳಸಿಕೊಂಡಿರುವ ಕೆಲವೇ ಸ್ತ್ರೀಪಾತ್ರಗಳು ಇಡೀ ಸ್ತ್ರೀಜನಾಂಗಕ್ಕಷ್ಟೇ ಅಲ್ಲದೇ ಇಡೀ ಮಾನವ ಜನಾಂಗಕ್ಕೇ ಮಾದರಿಯಾಗುವಂತೆ ಚಿತ್ರಿಸಿದ್ದಾನೆ. ಗುಮ್ಮಳಾಪುರದ ಸಿದ್ಧಲಿಂಗಯತಿಯು 4 ಜನ ವಚನಕಾರ್ತಿಯರ 91 ವಚನಗಳನ್ನು ಬಳಸಿದ್ದಾನೆ. ಈ ಶೂನ್ಯಸಂಪಾದನೆಯಲ್ಲಿ ಮೂಡಿಬಂದಿರುವ ವಚನಕಾರ್ತಿಯರ ಪಾತ್ರಗಳು ಸಾಮಾನ್ಯ ಸ್ತ್ರೀಯಂತೆ ರೂಪ ತಳೆದು, ಲೋಕದಲ್ಲಿರುವ ತಮ್ಮ ಗಂಡಂದಿರಿಗೆ ಹೆಂಡತಿಯಾಗಿದ್ದುಕೊಂಡು, ತಮ್ಮ ಕಾಯಕದ ಮೂಲಕ ಸಾಧನೆಯ ಶಿಖರವನ್ನು ತಲುಪಿದವರಾಗಿದ್ದಾರೆ. ಇವರು ತಮ್ಮ ಪತಿಯ ಸಾಧನೆಯಲ್ಲಿ ಭಾಗಿಗಳಾಗಿದ್ದು, ಅಷ್ಟೇ ಅಲ್ಲದೇ ತಮ್ಮ ಪತಿಯು ತನ್ನ ದಾರಿಯನ್ನು ಮರೆತಿರುವಾಗ ಅವನನ್ನು ಸರಿದಾರಿಗೆ ತರುವ ಕೆಲಸವನ್ನು ಕೈಗೊಂಡಿರುವುದು. ಪತಿಗೆ ಬುದ್ಧಿ ಹೇಳುವ ಮಟ್ಟಕ್ಕೆ ಪ್ರಬುದ್ಧತೆಯನ್ನು ಪಡೆದವರಾಗಿದ್ದಾರೆ. ಇಲ್ಲಿ ಬರುವ ಸ್ತ್ರೀಪಾತ್ರಗಳ ಸ್ಥಾನ– ಮಾನ, ಕಾಯಕ, ವಯಸ್ಸಿನಲ್ಲಿ ಭಿನ್ನತೆಯಿದ್ದರೂ ಎಲ್ಲರಲ್ಲಿಯು ಆಧ್ಯಾತ್ಮದ ಗುರಿ ಒಂದೇ ಆಗಿದೆ ಎಂಬುದು ಗಮನಿಸತಕ್ಕ ಸಂಗತಿಯಾಗಿದೆ.

ಶೂನ್ಯ ಸಂಪಾದನಾಕಾರರು ತಮ್ಮ ಪರಿಷ್ಕರಣೆಯಲ್ಲಿ ಸಂಯೋಜಿಸಿದ, ಸಿದ್ಧರಾಮನ ಲಿಂಗ ದೀಕ್ಷಾ ಪ್ರಸಂಗ, ನುಲಿಯ ಚಂದಯ್ಯಗಳ ಪ್ರಸಂಗ, ಘಟ್ಟಿವಾಳಯ್ಯಗಳ ಪ್ರಸಂಗ ಈ ಎಲ್ಲಾ ಸಂಪಾದನೆಗಳಲ್ಲಿ ಇಷ್ಟಲಿಂಗದ ಪ್ರಾಮುಖ್ಯತೆಯ ಪ್ರತಿಪಾದನೆಗೆ ಮತ್ತು ಧಾರ್ಮಿಕ ಪಥ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಚಾಮರಸನ ಪ್ರಭುಲಿಂಗಲೀಲೆ ಅಲ್ಲಮನ ವಾಸ್ತವ ಬದುಕಿನಿಂದ ದೂರ ಸರಿಯಿತು. ಹರಿಹರನ ಕಾಮಲತೆ ಇಲ್ಲಿ ಮಾಯೆಯಾದಳು. ಹೆಣ್ಣು ಮಾಯೆಯಲ್ಲವೆಂದು ಹೇಳಿದ ಅಲ್ಲಮನೇ ಇಲ್ಲಿ ಹೆಣ್ಣನ್ನು ಮಾಯೆಯೆಂದು ಭಾವಿಸಿದ. ಮಾಯೆಯನ್ನು ಸೋಲಿಸಿ ಮಾಯಾಕೋಲಾಹಲನಾದ. ಹನ್ನೆರಡನೇ ಶತಮಾನದ ಶಿವಶರಣರ ಪ್ರಗತಿಪರ ವಿಚಾರಗಳೆಲ್ಲಾ ಶೂನ್ಯ ಸಂಪಾದನಾಕಾರರ ಕಾಲಕ್ಕೆ ಮೂಲೆಗುಂಪಾದವು. ಹೀಗಾಗಿ ಇದು ವೀರಶೈವ ಧರ್ಮದ ಪುನರುತ್ಥಾನವೇ ಹೊರತು, ವಚನ ಚಳವಳಿಯ ಪುನರುತ್ಥಾನವಲ್ಲ. ಇವರೆಲ್ಲಾ ವೀರಶೈವದ ಧಾರ್ಮಿಕ ಪಥ್ಯವನ್ನು ಪ್ರಚಾರ ಪಡಿಸಿದರೇ ಹೊರತು ಅದರ ಸಾಂಸ್ಕೃತಿಕ ಪಥ್ಯವನ್ನಲ್ಲ ಎಂಬ ನಿಲುವು ಕೆಲವು ಪ್ರಗತಿ ಪರರ ನಿಲುವಾಗಿದೆ. ಡಾ. ಆರ್. ಸಿ. ಹಿರೇಮಠ ಅವರು ತಾವು ಸಂಪಾದಿಸಿರುವ, ಗುಮ್ಮಳಾಪುರ ಸಿದ್ಧಲಿಂಗದೇವರು ಶೂನ್ಯಸಂಪಾದನೆಯ ಪ್ರಸ್ತಾವನೆಯಲ್ಲಿ ಒಂದು ಮಾತು ಹೇಳುತ್ತಾರೆ. "ಶೈವ ಪುರಾತನರ ಚರಿತ್ರೆಗಳಲ್ಲಿ ಶಿವನು ಬಗೆ ಬಗೆಯ ರೂಪದಿಂದ ಬಂದು ಭಕ್ತಜನರನ್ನು ಉದ್ಧರಿಸಿದಂತೆ ಸಾಕಾರ ಶಿವನಾದ ಈ ಪ್ರಭುದೇವರು ಬಗೆಬಗೆಯ ಹಾದಿಯಿಂದ ಭಕ್ತಪ್ರಮಥರನ್ನು ಉದ್ಧರಿಸುತ್ತಾನೆ. " ಡಾ. ಆರ್. ಸಿ. ಹಿರೇಮಠರು ಈ ಶೂನ್ಯಸಂಪಾದನೆಗಳ ಮೂಲ ಉದ್ದೇಶವನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಶೂನ್ಯಸಂಪಾದನಾಕಾರರ ಈ ಉದ್ದೇಶ ವಚನಚಳವಳಿಯ ಧೋರಣೆಗೆ ಅನುಭವ ಮಂಟಪದ ಆಶಯಕ್ಕೆ ತದ್ವಿರುದ್ಧವಾಗಿದೆ. ಶಿವನನ್ನು ಕೇಂದ್ರೀಕರಿಸುವ ಭಕ್ತಿ ಶೈವಪುರಾತನರದಾದರೆ, ಶಿವನನ್ನು ವಿಕೇಂದ್ರೀಕರಿಸುವ, ಶಿವನಿಗಿಂತ ಶಿವಶರಣರೇ ಅಧಿಕವೆಂದು ಹೇಳುವ ಆಶಯ ವಚನಕಾರರದು. ಶಿವಕೇಂದ್ರಿತ ದೇವಾಲಯಗಳತ್ತ ಶೈವಪುರಾತನರು ಬಂದರೆ, ಜೀವಕೇಂದ್ರಿತ ಜನಸಮುದಾಯದತ್ತ ಹೋಗಲು ಶರಣರು ಹಾತೊರೆದಿದ್ದಾರೆ. ದೇವ ಭವ್ಯನಾಗುವ ಪರಿ ಅಲ್ಲಿದ್ದರೆ, ಜೀವ ದೇವನಾಗುವ ಹೋರಾಟ ಇಲ್ಲಿದೆ. ಶೂನ್ಯಸಂಪಾದನೆಯು ಸಾಮಾಜಿಕ ಮೌಲ್ಯಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸುವ ಕೆಲಸವನ್ನು ಮಾಡಿದೆ. ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಮ್ಮ, ಅಕ್ಕಮಹಾದೇವಿ, ನೀಲಲೋಚನೆಯರ ಜೀವನ ಪ್ರಸಂಗಗಳಲ್ಲಿ ಸ್ತ್ರೀಸ್ವಾತಂತ್ರ್ಯ ಹಾಗೂ ಸಮಾನತೆಯ ಪ್ರತಿಪಾದನೆಯಿದೆ. ಅದಲ್ಲದೇ ಶೂನ್ಯಸಂಪಾದನೆಯ ಉದ್ದಕ್ಕೂ ಭಕ್ತಿಯ ಪ್ರತಿಪಾದನೆ ಕಂಡುಬರುತ್ತದೆ. ಶೂನ್ಯಸಂಪಾದನೆಯಲ್ಲಿ ಚಿತ್ರಿತವಾಗಿರುವ ಸನ್ನಿವೇಶಗಳ ಮೂಲಕ ಮಾನವೀಯ ಅನುಕಂಪ, ಸರ್ವಸಮಾನತೆ, ಶ್ರಮದ ದುಡಿಮೆ, ಸಂಪತ್ತಿನ ಸದ್ವಿನಿಯೋಗ,

ಅಸಂಗ್ರಹ, ಸದುವಿನಯ, ಸ್ತ್ರೀಸ್ವಾತಂತ್ರ್ಯ, ದಾಸೋಹ, ಕಾಯಕ, ಭಕ್ತಿ ಈ ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸಿದ್ದಾರೆ ಪ್ರಸ್ತುತ ಸವಾಲುಗಳಿಗೆ ಶೂನ್ಯಸಂಪಾದನೆಗಳಲ್ಲಿ ಉತ್ತರಗಳಿಲ್ಲದಿದ್ದರೂ, ಇವುಗಳ ರಚನೆಗೊಂಡ ಸಂದರ್ಭದಲ್ಲಿ ಇಂತಹ ಕೃತಿಗಳ ಅನಿವಾರ್ಯತೆ ಎದ್ದು ಕಾಣಿಸುತ್ತದೆ. ಹನ್ನೆರಡನೇ ಶತಮಾನದ ವಚನಕಾರರ ಸಾಮಾಜಿಕ ಆರ್ಥಿಕ ಚಿಂತನೆಗಳಿಗಿಂತ, ಶೂನ್ಯ ಸಂಪಾದನಾಕಾರರಿಗೆ ಧಾರ್ಮಿಕ ವಿಷಯವೇ ಮುಖ್ಯವಾಯಿತು. ಆದಾಗ್ಯೂ ನಾಲ್ಕು ಶೂನ್ಯ ಸಂಪಾದನೆಗಳ ಸ್ವರೂಪವೇನೇ ಇರಲಿ, ಇವು ಭಿನ್ನಾಭಿಪ್ರಾಯವನ್ನು ಹೊಟ್ಟೆಯಲ್ಲಿಟ್ಟುಕೊಂಡು ಚರ್ಚೆ ಬೆಳೆಸುವ ಪ್ರಜಾಸತ್ತಾತ್ಮಕಗುಣದ ಭಾಗವಾಗಿ ಬಂದವುಗಳು ಎಂಬುದು ಇಲ್ಲಿ ಗಮನಿಸ ಬೇಕಾದ ಸಂಗತಿಯಾಗಿದೆ. ಶೂನ್ಯಸಂಪಾದನೆಯ ಈ ಸರಣಿ ಪ್ರತಿಕ್ರಿಯೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಬಹುದೊಡ್ಡ ವಿದ್ಯಮಾನವಾಗಿರುವುದನ್ನು ವಿದ್ವಾಂಸರೂ ಗುರುತಿಸಿದ್ದಾರೆ. ಶರಣ ಶರಣೆಯರು ಅಲ್ಲಮನೊಡನೆ ಸಂಭಾಷಿಸಿ ಆತನ ಜ್ಞಾನದ ಬೆಳಕಿನಲ್ಲಿ ತಮ್ಮ ಅರಿವಿನ ಮಾರ್ಗವನ್ನು ಕೈಗೊಂಡು ಶೂನ್ಯವನ್ನು ಸಂಪಾದಿಸಿಕೊಂಡ ವಿವರವೇ ಶೂನ್ಯ ಸಂಪಾದನೆಯಲ್ಲಿ ಪ್ರಮುಖ ಭಾಗವಾಗಿದೆ. ಶ್ರೇಷ್ಠವಾದ ಅನುಭವದ ಸ್ಥಿತಿಯನ್ನು ಪಡೆದು ಪೂರ್ಣವಾಗುವುದನ್ನು ಸಂಕೇತಿಸುತ್ತದೆ. ಹೀಗಾಗಿ ಶರಣ ಧರ್ಮದ ಆಚರಣೆಗಳನ್ನು ಉಳಿಸಿಕೊಳ್ಳುವುದು ಅಂದು ಅವರಿಗೆ ಅನಿವಾರ್ಯವಾಗಿತ್ತು. ಅವುಗಳನ್ನು ಗುಮ್ಮಳಾಪುರದ ಸಿದ್ಧಲಿಂಗಯತಿಗಳು ತಮ್ಮ ಶೂನ್ಯ ಸಂಪಾದನೆಯಲ್ಲಿ ಪ್ರತಿಪಾದಿಸಿದ್ದಾರೆ. ಹೀಗೆ ವಚನಕಾರರ ತತ್ವಾದರ್ಶಗಳನ್ನು ಇಲ್ಲಿ ಗುಮ್ಮಳಾಪುರದ ಸಿದ್ಧಲಿಂಗ ಯತಿಯು ಅಚ್ಚುಕಟ್ಟಾಗಿ ತಿಳಿಯ ಪಡಿಸಿದ್ದಾನೆ.

**ಪರಾಮರ್ಶನ ಗ್ರಂಥಗಳು:**

1. ರವೀಂದ್ರನಾಥ ಕೆ. ಮತ್ತು ಪ್ರಕಾಶ ಗಿರಿಮಲ್ಲನವರ (ಸಂ.), (2021), ಗುಮ್ಮಳಾಪುರದ ಸಿದ್ಧಲಿಂಗ ದೇವರ ಶೂನ್ಯ ಸಂಪಾದನೆ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವರ ಸಂಸ್ಥಾನವಿರಕ್ತ ಮಠ, ಸೊಂಡೂರು.
2. ಶಿವರುದ್ರಪ್ಪ ಜಿ. ಎಸ್., (1975), ಕನ್ನಡ ಸಾಹಿತ್ಯ ಸಮೀಕ್ಷೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ತಿಪ್ಪೇರುದ್ರಸ್ವಾಮಿ ಹೆಚ್., (1994), ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
4. ಮುಗಳಿ ರಂ. ಶ್ರೀ., (1998), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.
5. ಚಿದಾನಂದಮೂರ್ತಿ ಎಂ., (1988), ಶೂನ್ಯಸಂಪಾದನೆಯನ್ನು ಕುರಿತು, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
6. ಕಲಬುರ್ಗಿ ಎಂ. ಎಂ., (1995), ಮಾರ್ಗ–1, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.
7. ವಿದ್ಯಾಶಂಕರ ಎಸ್., (2008), ಶಬ್ದ ಸಂಪುಟ, ಸ್ನೇಹ ಪ್ರಕಾಶನ, ಬೆಂಗಳೂರು.
8. ವಿದ್ಯಾಶಂಕರ ಎಸ್., (2014), ವೀರಶೈವ ಸಾಹಿತ್ಯ ಚರಿತ್ರೆ: ಸಂಪುಟ–3, ಭಾಗ–1, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
9. ನಾಗಭೂಷಣ ಸಿ., (2017), ಶರಣ ಸಾಹಿತ್ಯ ದೀಪಿಕೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.
10. ನಾಗಭೂಷಣ ಸಿ., (2023), ಕನ್ನಡ ಸಾಹಿತ್ಯ–ಸಂಸ್ಕೃತಿ ಬುತ್ತಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
11. ಬಸವರಾಜ ಸಬರದ (ಸಂ.), (2011), ಶೂನ್ಯ ಸಂಪಾದನೆ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.